ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI


ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 06 RNI Number : KNKAN/25/A2770 06-01-2026 Tuesday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :06 ರಾಯಚೂರು 06-01-2026 ಮಂಗಳವಾರ ಪುಟ 04 ಬೆಲೆ ರೂ.2/- ಮೊ:8660146563

ಭೂ ದಾಖಲೆಗಳಲ್ಲಿ ಸುಳ್ಳು ದಾಖಲೆ ಸೃಷ್ಟಿ ತಡೆಯಲು ಡಿಜಿಟಲೀಕರಣ ಮಹತ್ವದ ಹೆಜ್ಜೆ : ಕೃಷ್ಣ ಬೈರೇಗೌಡ



ಬೆಂಗಳೂರು,ಜ.05-

ರಾಜ್ಯದ ಭೂ ದಾಖಲೆಗಳನ್ನು ಸಂಪೂರ್ಣ ಡಿಜಿಟಲೀಕರಣ ಮಾಡಲಾಗುತ್ತಿದ್ದು, ಭೂ ದಾಖಲೆಗಳಲ್ಲಿ ನಕಲಿ ನಮೂದು ಹಾಗೂ ಸುಳ್ಳು ದಾಖಲೆಗಳ ಸೃಷ್ಟಿಯನ್ನು ತಡೆಯಲು ಡಿಜಿಟಲೀಕರಣ ಮಹತ್ವದ ಹೆಜ್ಜೆಯಾಗಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದ್ದಾರೆ.

ಸೋಮವಾರ ಇಲ್ಲಿನ ಕಂದಾಯ ಭವನದಲ್ಲಿ ಬೆಂಗಳೂರು ಉತ್ತರ ಮತ್ತು ದಕ್ಷಿಣ ಉಪವಿಭಾಗಾಧಿಕಾರಿಗಳ ಕಚೇರಿಯ ಕಂದಾಯ ದಾಖಲಾತಿಗಳ ಸ್ಕ್ಯಾನಿಂಗ್ ಮತ್ತು ಡಿಜಿಟಲೀಕರಣಗೊಳಿಸುವ ಭೂ ಸುರಕ್ಷಾ ಯೋಜನೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸ್ಕ್ಯಾನಿಂಗ್ ಮೂಲಕ ದಾಖಲೆಗಳನ್ನು ಡಿಜಿಟಲ್ ಮಾದರಿಯಲ್ಲಿ ರಕ್ಷಿಸುವುದರಿಂದ ಭವಿಷ್ಯದಲ್ಲಿ ನಕಲಿ ದಾಖಲೆಗಳ ಸೃಷ್ಟಿಗೆ ಕಡಿವಾಣ ಹಾಕಿದಂತಾಗುವುದು. ಕಂದಾಯ ದಾಖಲೆಗಳು ಅಥವಾ ಕಡತಗಳು ಕಳುವಾಗುವುದನ್ನು ಹಾಗೂ ಮಧ್ಯವರ್ತಿಗಳ ಹಾವಳಿಯನ್ನು ತಪ್ಪಿಸಬಹುದಾಗಿದೆ. ಸಾರ್ವಜನಿಕರ ಕೈಬೆರಳ ತುದಿಯಲ್ಲೇ ಅವರ ಜಮೀನಿನ ದಾಖಲೆ ಸುಲಭವಾಗಿ ಲಭ್ಯವಾಗುವಂತೆ ಮಾಡುವುದು ಯೋಜನೆಯ ಉದ್ದೇಶವಾಗಿದೆ ಎಂದು ಅವರು ಹೇಳಿದರು.

ಇಂದು ನಮ್ಮ ಉದ್ದೇಶ ಯಶಸ್ವಿಯಾಗಿದ್ದು, ಸಾರ್ವಜನಿಕರು ಭೂ ಸುರಕ್ಷಾ ವೆಬ್ ಸೈಟ್ ಮೂಲಕ ತಮ್ಮ ಮನೆಯಲ್ಲಿದ್ದೇ ಭೂ ದಾಖಲೆಗಳನ್ನು ಪಡೆಯಬಹುದಾಗಿದೆ. ಈಗಾಗಲೇ ಸ್ಕ್ಯಾನಿಂಗ್ ಆಗಿರುವ ಎಲ್ಲ ದಾಖಲೆಗಳು ಆನ್‌ಲೈನ್‌ನಲ್ಲಿ ಲಭ್ಯವಿದ್ದು, 36,36,596 ಪುಟಗಳನ್ನು ಸಾರ್ವಜನಿಕರು ಆನ್‌ಲೈನ್ ಮೂಲಕ ಪಡೆದಿದ್ದಾರೆ ಎಂದು ಅವರು ಮಾಹಿತಿ ನೀಡಿದರು.

ಹಿಂದಿನ ವರ್ಷ ಜನವರಿಯಲ್ಲಿ ತಾಲೂಕು ಕಚೇರಿಗಳ ಮೂಲ ಭೂ ದಾಖಲೆಗಳನ್ನೂ ಸ್ಕ್ಯಾನ್ ಮಾಡಿ ಡಿಜಿಟಲೀಕರಿಸಲಾಗಿತ್ತು. 240 ತಾಲೂಕುಗಳ ಪೈಕಿ 70 ತಾಲೂಕುಗಳಲ್ಲಿ ಗಣಕೀಕರಣ ಸಂಪೂರ್ಣವಾಗಿ ಮುಗಿಸಲಾಗಿದೆ. ಇದೀಗ ಉಪವಿಭಾಗಾಧಿಕಾರಿ ಹಾಗೂ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿರುವ ದಾಖಲೆಗಳನ್ನು ಸ್ಕ್ಯಾನಿಂಗ್ ಮಾಡಲು ಇಂದಿನಿಂದ ಚಾಲನೆ ನೀಡಲಾಗಿದೆ ಎಂದು ಅವರು ತಿಳಿಸಿದರು.

ತಾಲೂಕು ಕಚೇರಿಗಳ ಮೂಲ ದಾಖಲೆ ಸ್ಕ್ಯಾನಿಂಗ್ ಪ್ರಗತಿಯ ಹಾದಿಯಲ್ಲಿರುವಾಗಲೇ ಭೂ ಸುರಕ್ಷಾ ಯೋಜನೆಯ ಅಡಿಯಲ್ಲಿ ಉಪವಿಭಾಗಾಧಿಕಾರಿಗಳು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿರುವ ಮೂಲ ಭೂ ದಾಖಲೆಗಳನ್ನೂ ಸ್ಕ್ಯಾನ್ ಮಾಡುವ ಕೆಲಸಕ್ಕೂ ಮುಂದಾಗಿದ್ದಾರೆ. ಇಂದು ಎಸಿ ಕಚೇರಿಗಳ ಸ್ಕ್ಯಾನಿಂಗ್‌ಗೆ ಸಾಂಕೇತಿಕವಾಗಿ ಚಾಲನೆ ನೀಡುವ ಮೂಲಕ ಇಡೀ ರಾಜ್ಯಾದ್ಯಂತ ಎಸಿ, ಡಿಸಿ ಕಚೇರಿಗಳ ಕಂದಾಯ ದಾಖಲೆಗಳ ಗಣಕೀಕರಣಕ್ಕೆ ಸಾಂಕೇತಿಕ ಚಾಲನೆ ನೀಡಲಾಗಿದೆ ಎಂದು ಅವರು ತಿಳಿಸಿದರು.

ಈ ಹಿಂದೆ ಹೊರ ಬಂದಿರುವ ನಕಲಿ ದಾಖಲೆಗಳ ಸೃಷ್ಟಿ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿದ್ದೇವೆ. ಪ್ರತಿಯೊಂದು ಅನುಮಾನಾಸ್ಪದ ಪ್ರಕರಣಗಳನ್ನು ಕುಲಂಕೂಷವಾಗಿ ಪರಿಶೀಲಿಸಿ ಅಗತ್ಯವಿದ್ದಲ್ಲಿ, ಫೋರೆನ್ಸಿಕ್ ಲ್ಯಾಬ್‌ಗೆ ಕಳಿಸಿ ದಾಖಲೆಗಳ ನೈಜತೆ ಕುರಿತು ವರದಿಯನ್ನು ಪಡೆದು ಸೂಕ್ತ ಕ್ರಮ ವಹಿಸಲಾಗುವುದು ಎಂದು ಅವರು ಭರವಸೆ ನೀಡಿದರು.

ಇನ್ನೂ ಮುಂದೆ ದಾಖಲೆಗಳನ್ನು ಸ್ಕ್ಯಾನ್ ಮಾಡುವಾಗ ಅನುಮಾನಾಸ್ಪದವಾದ ದಾಖಲೆಗಳನ್ನು ಫೋರೆನ್ಸಿಕ್ ಮೂಲಕ ತನಿಖೆ ಮಾಡಿಸಿ ಕ್ರಮ ಕೈಗೊಳ್ಳುತ್ತೇವೆ. ರಾಜ್ಯದ ಎಲ್ಲ ಎಸಿ, ಡಿಸಿ ಕಚೇರಿಯ ದಾಖಲೆಗಳ ಸ್ಕ್ಯಾನಿಂಗ್ ಪ್ರಕ್ರಿಯೆಯನ್ನು ಮುಂದಿನ ಮೂರು ತಿಂಗಳಲ್ಲಿ ಮುಗಿಸಲಾಗುವುದು. ಸರ್ವೇ ಇಲಾಖೆ ಹಾಗೂ ನೋಂದಣಿ ಇಲಾಖೆಯಲ್ಲೂ ಸ್ಕ್ಯಾನಿಂಗ್ ಕೆಲಸಗಳು ಬಹುತೇಕ ಆರಂಭವಾಗಿದ್ದು, ಈ ಎಲ್ಲ ಕೆಲಸಗಳಿಗೆ 150 ಕೋಟಿ ರೂ. ಅನುದಾನ ಇದೆ. ಈಗಾಗಲೇ 100 ಕೋಟಿ ರೂ. ಖರ್ಚು ಮಾಡಲಾಗಿದೆ ಎಂದು ಅವರು ತಿಳಿಸಿದರು.

ಆನೇಕಲ್, ದೇವನಹಳ್ಳಿ ಸೇರಿದಂತೆ ಕೆಲವು ತಾಲೂಕುಗಳಲ್ಲಿ ನಕಲಿ ದಾಖಲೆಗಳನ್ನೂ ಸ್ಕ್ಯಾನ್ ಮಾಡಿರುವ ದೂರು ಇದ್ದು, 16 ಜನರ ಮೇಲೆ ಎಫ್‌ಐಆರ್ ಮಾಡಲಾಗಿದೆ. ಇಂತಹ ಕೆಲಸಕ್ಕೂ ನಿಯಂತ್ರಣ ಹೇರಲಾಗುತ್ತಿದೆ. ಆದರೆ, ಸ್ಕ್ಯಾನಿಂಗ್ ನಂತರ ಯಾವುದೇ ವಂಚನೆಗೆ ಅವಕಾಶ ಇಲ್ಲ ಎಂದು ಅವರು ತಿಳಿಸಿದರು.

ಇದೇ ವೇಳೆ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಠಾರಿಯಾ, ಬೆಂಗಳೂರು ಜಿಲ್ಲಾಧಿಕಾರಿ ಜಗದೀಶ್ ಸೇರಿದಂತೆ ಇತರ ಅಧಿಕಾರಿಗಳು ಉಪಸ್ಥಿತರಿದ್ದರು.

ರಾಜ್ಯದಲ್ಲಿ ಕಂದಾಯ ಇಲಾಖೆ ಎಲ್ಲ ಮೂಲ ದಾಖಲೆಗಳನ್ನು ಸ್ಕ್ಯಾನ್ ಮಾಡಿ ಶಾಶ್ವತವಾಗಿ ಸಂರಕ್ಷಿಸಲಾಗುತ್ತಿದೆ. ಹಿಂದಿನ ಜನವರಿಯಲ್ಲಿ ತಾಲೂಕು ಕಚೇರಿಗಳಲ್ಲಿ ಈ ಅಭಿಯಾನಕ್ಕೆ ಚಾಲನೆ ನೀಡಲಾಗಿದೆ. ರಾಜ್ಯಾದ್ಯಂತ 100 ಕೋಟಿ ಪುಟಗಳಷ್ಟು ಭೂ ದಾಖಲೆ ಇದ್ದು, 62 ಕೋಟಿ ಪುಟಗಳನ್ನು ಈಗಾಗಲೇ ಸ್ಕ್ಯಾನ್ ಮಾಡಿ ಮುಗಿಸಲಾಗಿದೆ. ಮುಂದಿನ ಮೂರು-ನಾಲ್ಕು ತಿಂಗಳಲ್ಲಿ ಎಲ್ಲ ಪುಟಗಳನ್ನೂ ಸಂಪೂರ್ಣ ಸ್ಕ್ಯಾನ್ ಮಾಡಲಾಗುವುದು.

ವಿನಃ ಕಾರಣ ನನ್ನ ಮೇಲೆ ಆರೋಪ-ಅಂಬೋಜಿ ರಾವ್



ರಾಯಚೂರು,ಜ.05-

ಜಿಲ್ಲೆಯಲ್ಲಿ ಭೂ ವಂಚನೆ ನಡೆಸುತ್ತಿರುವವರ ವಿರುದ್ಧ ಹೋರಾಟ ನಡೆಸುತ್ತಿದ್ದ ಸಮಾಜ ಸೇವಕ ಅಂಬಾಜಿ ರಾವ್, ಕೆಲವು vested vested ವ್ಯಕ್ತಿಗಳಿಂದ ಅವನ ಮೇಲೆ ಸುಳ್ಳು ಆರೋಪಗಳು ತೋರುತ್ತಿರುವುದಾಗಿ ತಿಳಿಸಿದ್ದಾರೆ. ಅವರು ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ಸಲ್ಲಿಸಿದ್ದು, ಕಾನೂನು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದ್ದಾರೆ.

ನಗರದ ಪತ್ರಿಕಾ ಭವನದಲ್ಲಿ ಸೋಮವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅಂಬಾಜಿ ರಾವ್, ಕಳೆದ ಒಂದು ವರ್ಷದಿಂದ ರಾಯಚೂರು ನಗರದಲ್ಲಿ ಇತರರ ಭೂಮಿಯನ್ನು ನಕಲಿ ದಾಖಲೆಗಳ ಮೂಲಕ ಮಾರಾಟ ಮಾಡುವ ಗ್ಯಾಂಗ್ ಗಳ ವಿರುದ್ಧ ಹೋರಾಟ ನಡೆಸಿ, ಸಾರ್ವಜನಿಕರಿಗೆ ತಮ್ಮ ಆಸ್ತಿಗಳ ದಾಖಲೆಗಳನ್ನು ಪರಿಶೀಲಿಸಲು ಮತ್ತು ಸಾರ್ವಜನಿಕ ಆಸ್ತಿಯನ್ನು ರಕ್ಷಿಸಲು ಮನವಿ ಮಾಡುತ್ತಿರುವುದಾಗಿ ವಿವರಿಸಿದರು.

ಅಕ್ಷಯ ಕುಮಾರ ಬಂಢಾರಿ ಅಲಿಯಾಸ್ ಪ್ರಮೋದ್ ಬಂಡಾರಿ, ಎಂ.ಡಿ. ಜಾವೀದ್, ಎಹಸನ್ ಅಹ್ಮದ್ ಹಸೀನ್ ಸೇರಿದಂತೆ ಹಲವು ಜನರ ವಿರುದ್ಧ ಪತ್ರಿಕಾಗೋಷ್ಠಿಗಳ ಮೂಲಕ ಎಚ್ಚರಿಕೆ ನೀಡಲಾಗಿದೆ. ಭೂ ವಂಚಕರು ಹಣದ ಆಮಿಷ ಒಪ್ಪಿಸಲು ಪ್ರಯತ್ನಿಸಿದರೂ, ಅಂಬಾಜಿ ರಾವ್ ತಮ್ಮ ಹೋರಾಟದಿಂದ ಪಡೆದ

3ನೇ ಪುಟಕ್ಕೆ

ನಕಲಿ ದಾಖಲೆ ಸೃಷ್ಟಿಸಿ ಭೂಮಿ ವರ್ಗಾವಣೆ:ಕ್ರಮಕ್ಕೆ ಆಗ್ರಹ



ರಾಯಚೂರು,ಜ.05-

ರಾಯಚೂರು ಸೀಮಾಂತರ ವ್ಯಾಪ್ತಿಯ ಸರ್ವೆ ನಂ. 1423ರಲ್ಲಿ 00.27 ಗುಂಟೆ ಭೂಮಿ, ಮೂಲ ಪಟ್ಟೆದಾರರಾದ ಚಂದ್ರಬಾಯಿ ಗಂಡ ಗೌಳಿ ಲಕ್ಷ್ಮಣರಾವ್ ಅವರ ಹೆಸರಿನಲ್ಲಿ ಇತ್ತು. ಚಂದ್ರಬಾಯಿ ಅವರ ಮರಣದ ಬಳಿಕ ಮರಣ ಪ್ರಮಾಣ ಪತ್ರವನ್ನು ದುರುಪಯೋಗಪಡಿಸಿಕೊಂಡು, ಅಂಬೋಜಿ ರಾವ್ ಅವರು ತಮ್ಮ ತಂದೆಯ ಹೆಸರಿನಲ್ಲಿ ನಕಲಿ ವಂಶಾವಳಿ ಪ್ರಮಾಣ ಪತ್ರ, ಮರಣ ಪ್ರಮಾಣ ಪತ್ರ ಹಾಗೂ ಆಧಾರ ಕಾರ್ಡ್ಗಳನ್ನು ಸೃಷ್ಟಿಸಿ ಭೂಮಿಯನ್ನು ತಮ್ಮ ಹೆಸರಿಗೆ ವರ್ಗಾವಣೆ ಮಾಡಿಕೊಂಡಿದ್ದಾರೆ ಎಂದು ಆರೋಪಿಸಿದರು.

ನಗರದ ಪತ್ರಿಕಾ ಭವನದಲ್ಲಿ ಇಂದು ಭೀಮ್ ಆರ್ಮಿ ಭಾರತ್ ಏಕ್ತಾ ಮೀಷನ್ ರಾಯಚೂರು ಜಿಲ್ಲಾ ಸಮಿತಿಯಿಂದ ನಡೆದ ಸುದ್ದಿಗೋಷ್ಠಿಯಲ್ಲಿ ಭೂ ಮಾಫಿಯಾ ಚಟುವಟಿಕೆಗಳ ವಿರುದ್ಧ ಗಂಭೀರ ಆರೋಪಗಳು ಕೇಳಿಬಂದವು. ಜಿಲ್ಲಾ ಅಧ್ಯಕ್ಷರಾದ ಪ್ರವೀಣ್ ಕುಮಾರ್ ಅವರು ಮಾತನಾಡಿ, ನಕಲಿ ದಾಖಲೆಗಳ ಮೂಲಕ ಭೂ ಕಬಳಿಕೆ ನಡೆಸುತ್ತಿರುವ ಅಂಬೋಜಿ ರಾವ್ ತಂದೆ ಹೀರಲಾಲ್ ಹಾಗೂ ಅವರ ಕುಟುಂಬವನ್ನು ಜಿಲ್ಲೆಯಿಂದ ತಕ್ಷಣ ಗಡಿಪಾರು ಮಾಡಬೇಕು ಎಂದು ಒತ್ತಾಯಿಸಿದರು.

ಈ ಅಕ್ರಮದಲ್ಲಿ ಕೆಲವು ಕಂದಾಯ ಇಲಾಖೆ ಅಧಿಕಾರಿಗಳು, ಮಹಾನಗರ ಪಾಲಿಕೆ ಸಿಬ್ಬಂದಿ, VA ಅಧಿಕಾರಿಗಳು ಹಣದ ಆಸೆಗೆ ಕೈಜೋಡಿಸಿರುವುದು ರಾಜ್ಯದ ಆಡಳಿತ ವ್ಯವಸ್ಥೆಯ ಮೇಲೆ ಗಂಭೀರ ಪ್ರಶ್ನೆಗಳನ್ನು ಎತ್ತಿದೆ ಎಂದು ಅವರು ಹೇಳಿದರು. ಯಾವುದೇ ಸಮರ್ಪಕ ತನಿಖೆ ಇಲ್ಲದೆ ಸರ್ಕಾರದ ನಿಯಮಗಳನ್ನು ಉಲ್ಲಂಘಿಸಿ ದಾಖಲೆಗಳನ್ನು ನೀಡಲಾಗಿದೆ ಎಂದು ದೂರಿದರು.

ಅಂಬೋಜಿ ರಾವ್ ತಂದೆ ಹೀರಲಾಲ್ ಅವರು ಬಿಎಸ್‌ಎನ್‌ಎಲ್ನ ಮಾಜಿ ನೌಕರರಾಗಿದ್ದು, ಭೂ ಕಬಳಿಕೆ ಸಂಬಂಧಿತ ಕಾನೂನು ಮತ್ತು ಪ್ರಕ್ರಿಯೆಗಳ ಕುರಿತು ಸಂಪೂರ್ಣ ಜ್ಞಾನ ಹೊಂದಿರುವುದರಿಂದ ಈ ಅಕ್ರಮಗಳನ್ನು ಯೋಜಿತವಾಗಿ ನಡೆಸಿದ್ದಾರೆ ಎಂದು ಪ್ರವೀಣ್ ಕುಮಾರ ಆರೋಪಿಸಿದರು. ಇವರ ವಿರುದ್ಧ ಭೂ ಮಾಫಿಯಾ, ವಂಚನೆ, ಗುಂಡಾಗಿರಿ, ರೌಡಿಸಂ ಸೇರಿದಂತೆ ಹಲವಾರು ಗಂಭೀರ ಆರೋಪಗಳಿದ್ದು, ಅಮಾಯಕ ಜನರ ಜೀವನಕ್ಕೆ ತೀವ್ರ ತೊಂದರೆ ಉಂಟಾಗಿದೆ ಎಂದು ಹೇಳಿದರು.

ಜಿಲ್ಲಾಧಿಕಾರಿಗಳು, ಅಪರ ಜಿಲ್ಲಾಧಿಕಾರಿಗಳು, ಸಹಾಯಕ ಆಯುಕ್ತರು ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ತಕ್ಷಣ ಕ್ರಮ ಕೈಗೊಂಡು ಭೂ ಮಾಫಿಯಾ ವಿರುದ್ಧ ಕಾನೂನು ಬಿಗಿತ ಸಾಧಿಸಬೇಕು. ಒಂದು ವಾರದೊಳಗೆ ಕ್ರಮ ಕೈಗೊಳ್ಳದಿದ್ದರೆ ಜಿಲ್ಲಾಧಿಕಾರಿಗಳ ಕಚೇರಿ ಎದುರು ಸತ್ಯಾಗ್ರಹ ಪ್ರತಿಭಟನೆ ನಡೆಸಲಾಗುವುದು ಎಂದು ಭೀಮ್ ಆರ್ಮಿ ಎಚ್ಚರಿಕೆ ನೀಡಿದೆ.

ಸುದ್ದಿಗೋಷ್ಠಿಯಲ್ಲಿ

3ನೇ ಪುಟಕ್ಕೆ



ಹೇಮರೆಡ್ಡಿ ಮಲ್ಲಮ್ಮ ಪುರಾಣ ಪ್ರಾರಂಭ.

ಸಿರವಾರ.ಜ.5-

ಪುರಾಣ ಮನುಷ್ಯನ ಜೀವನಕ್ಕೆ ಅಗತ್ಯ ಪುರಾಣ ಪುಣ್ಯ ಕಥೆಗಳನ್ನು ಕೇಳೋದರಿಂದ ಮನುಷ್ಯನ ಜೀವನದಲ್ಲಿ ಪುಣ್ಯ ಲಭಿಸುತ್ತದೆ ಅವರು ಬದುಕು ನೆಮ್ಮದಿಯಿಂದ ಕೂಡಿರುತ್ತದೆ ಎಂದ ನಾಲವಾರ ಮಠದ ಶ್ರೀ ಕೋರಿಸಿದ್ದೇಶ್ವರ ಮಠದ ಶ್ರೀ ಡಾ|| ಕೋರಿಸಿದ್ದೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು. ಸಾನಿಧ್ಯವನ್ನು ಶ್ರೀ ಷ||ಬ್ರ. ಈ ಡಾ. ಪಂಚಾಕ್ಷರ ಶಿವಾಚಾರ್ಯ ಮಹಾಸ್ವಾಮಿಗಳು ವಹಿಸದ್ದರು. ಷ||ಬ್ರ|| ಅಭಿನವ ರೇಣುಕ ಶಾಂತಮಲ್ಲ ಶಿವಾಚಾರ್ಯ ಮಹಾಸ್ವಾಮಿಗಳು. ಶ್ರೀ ಷ||ಬ್ರ|| ವಿರೂಪಾಕ್ಷ ಪಂಡಿತರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಕಲ್ಮಠ ಮಾನ್ವಿ. ಶ್ರೀ ಷ||ಬ್ರ|| ಶಂಭು ಸೋಮನಾಥ ಶಿವಾಚಾರ್ಯ ಮಹಾಸ್ವಾಮಿಗಳು ಸುಲ್ತಾನಪುರ. ಶ್ರೀ ವಿಶ್ವರಾಧ್ಯ ದೇವರು ಚಿಟ್ನಲ್ಲಿ. ಶ್ರೀಮಹಾಂತ ದೇವರು ಲೋಕಾಪೂರ. ಉಪಸ್ಥಿತಿ ಇದ್ದರು.

ಇತಿಹಾಸ ಪುಟ ಸೇರಿದ ಸರಕಾರಿ ಪ್ರೌಢಶಾಲೆಯ ವಜ್ರ ಮಹೋತ್ಸವ

ಶಿಷ್ಯರಿಂದ ಗುರುಗಳಿಗೆ ಸನ್ಮಾನ. ಗುರು- ಶಿಷ್ಯರಿಂದ ತುಂಬಿ ತುಳಿಕಿದ ಸರ್ಕಾರಿ ಪ್ರೌಢಶಾಲೆ



ಸಿರವಾರ.ಜ.5-

ಶಿಕ್ಷಕರ ನಿಸ್ವಾರ್ಥ ಸೇವೆಗೆ ಒಂದಿಲಾ ಒಂದು ದಿನ ಉತ್ತಮ ಗೌರವ ಸನ್ಮಾನ ಸಿಗುತ್ತದೆ ಎಂಬುದಕ್ಕೆ ಸರ್ಕಾರಿ ಪ್ರೌಢಶಾಲೆಯಲ್ಲಿ ಕಾರ್ಯನಿರ್ವಹಿಸಿದ ಗುರುಗಳಿಗೆ ಶಿಷ್ಯರಿಂದ ಹಮ್ಮಿಕೊಂಡಿದ ಗುರುವಂದನೆ ಕಾರ್ಯಕ್ರಮ ಸಾಕ್ಷಿಯಾಗಿತು. ದೇಶದ ಬೇರೆ ಬೇರೆ ಕಡೆ ಕಾರ್ಯ ನಿಮಿತ್ಯ ಹೋಗಿದ್ದ ವಿದ್ಯಾರ್ಥಿಗಳೆಲ್ಲರೂ ತಮ್ಮ ಗೂಡಿಗೆ ಮರಳಿದ ಭಾವ ಉಂಟಾದರೆ. ಶಾಲೆ, ಕಾಲೇಜು ನಿರ್ಮಾಣಕ್ಕೆ ಸ್ಥಳ ನೀಡಿದ ನೀಲಮ್ಮ ಗೌಡಶಾನಿಯವರ ಕುಟುಂಬದಲ್ಲಿ ಆನಂದ ಬಾಷ್ಪ ಕಾಣುತ್ತಿತು. ಪಟ್ಟಣದ ಸರಕಾರಿ ಬಾಲಕರ ಪ್ರೌಢಶಾಲೆಯು 60 ವರ್ಷಗಳನ್ನು ಪೂರೈಸಿದ ಸಂಭ್ರಮದ ಅಂಗವಾಗಿ ಹಮ್ಮಿಕೊಂಡಿದ್ದ 'ವಜ್ರ ಮಹೋತ್ಸವ' ಮತ್ತು 'ಗುರುವಂದನಾ' ಕಾರ್ಯಕ್ರಮವು ಅತ್ಯಂತ ಸಡಗರ, ಸಂಭ್ರಮ ಹಾಗೂ ಭಾವನಾತ್ಮಕ ಕ್ಷಣಗಳಿಗೆ ಸಾಕ್ಷಿಯಾಯಿತು. ಶಿಕ್ಷಕರಿಗೆ ಪುಷ್ಪಾರ್ಪಣೆ ಮಾಡುವ ಮೂಲಕ ಸ್ವಾಗತಿಸಿ, ನೀಲಮ್ಮ ಗೌಡಶಾನಿ ಪುತ್ಥಳಿಗೆ ಪುಷ್ಪಾರ್ಪಣೆ ಮಾಡಿದರು.

ಕಾರ್ಯಕ್ರಮದ ಪ್ರಮುಖ ಆಕರ್ಷಣೆ ಎಂದರೆ 'ಗುರುವಂದನೆ'. ಶಾಲೆಯಲ್ಲಿ ಈ ಹಿಂದೆ ಸೇವೆ ಸಲ್ಲಿಸಿ ನಿವೃತ್ತರಾಗಿ ಕಾರ್ಯನಿರ್ವಹಿಸಿದ ಎಲ್ಲಾರಿಗೂ ಆಹ್ವಾನ ನೀಡಲಾಗಿತು. ಆದರೆ 80 ಕೂ ಅದಿಕ ಶಿಕ್ಷಕರು ಆಗಮಿಸಿದರು. ವಿವಿಧ ಉನ್ನತ ಹುದ್ದೆಗಳಲ್ಲಿರುವ ಹಳೆ ವಿದ್ಯಾರ್ಥಿಗಳು ತಮ್ಮ ಗುರುಗಳ ಪಾದಕ್ಕೆ ನಮಸ್ಕರಿಸಿ ಆಶೀರ್ವಾದ ಪಡೆದ ದೃಶ್ಯವು ನೆರೆದಿದ್ದವರಲ್ಲಿ ಭಾವುಕತೆ ಮೂಡಿಸಿತು.ಹಳೆ ವಿದ್ಯಾರ್ಥಿಗಳ ಸಮಾಗಮ: 1964ರಿಂದ ಇಲ್ಲಿಯವರೆಗೆ ಈ ಶಾಲೆಯಲ್ಲಿ ಓದಿದ ಹಳೆ ವಿದ್ಯಾರ್ಥಿಗಳು ರಾಜ್ಯದ ಮೂಲೆ ಮೂಲೆಗಳಿಂದ ಆಗಮಿಸಿದ್ದರು. ವೈದ್ಯರು, ಇಂಜಿನಿಯರ್‌ಗಳು, ರಾಜಕಾರಣಿಗಳು ಮತ್ತು ಕೃಷಿಕರಾಗಿ ನೆಲೆಸಿರುವ ಹಳೆಯ ಗೆಳೆಯರು ಪರಸ್ಪರ ಭೇಟಿಯಾಗಿ ಬಾಲ್ಯದ ನೆನಪುಗಳನ್ನು ಹಂಚಿಕೊಂಡರು.

3ನೇ ಪುಟಕ್ಕೆ

ನದೀಮ್ ಸಾಬ್ ಉರುಸ್ :ವಿವಿಸ್ ಎಸ್ ಎನ್ ಅಧ್ಯಕ್ಷ ಸದಸ್ಯರಿಗೆ ಸನ್ಮಾನ



ಸಿರವಾರ.ಜ.5-

ಪಟ್ಟಣದ ವಾರ್ಡ ನಂ 20 ರಲ್ಲಿರುವ ಹಜರತ್ ನದೀಮ್ ಸಾಬ್ ಉರುಸ್ ಅಂಗವಾಗಿ ಧರ್ಗಾಕ್ಕೆ ಆಗಮಿಸಿದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದನಿ ಅಧ್ಯಕ್ಷ ಚನ್ನಪ್ಪ ಚನ್ನೂರು, ಉಪಾಧ್ಯಕ್ಷ ನಾಗರಾಜಗೌಡ, ನಿರ್ದೇಶಕರಾದ ಬಸ್ಸಪ್ಪಗೌಡ ನಂದರೆಡ್ಡಿ, ಪಂಪಣ್ಣ ಸಾಹುಕಾರ, ದೇವಪುತ್ರಪ್ಪ, ಮಹ್ಮದ್ ವಾಹೀದ, ಶಿವರಾಜ ಬೆಳವಿನೂರು, ಅಡಿವೆಪ್ಪ,ಸೂರಿ ದುರುಗಣ್ಣ ನಾಯಕ ಧರ್ಮ ಗುರುಗಳಾದ ಮಂಜೂರು ಪಾಷ ಸನ್ಮಾನಿಸಿದರು. ಸದಸ್ಯರು ಮಂಜೂರು ಸಾಬ್ ಅವರಿಗೆ ಸನ್ಮಾನಿಸಿದರು.

ವಿಜೃಂಭಣೆಯಿಂದ ಜರುಗಿದ ನದೀಮ್ ಸಾಬ್ ಉರುಸ್



ಸಿರವಾರ.ಜ.5-

ಪಟ್ಟಣದ ವಾರ್ಡ ನಂ 20 ರಲ್ಲಿರುವ ಹಜರತ್ ನದೀವ್ ಸಾಬ್ ಉರುಸ್ ವಿಜೃಂಬಣೆಯಿಂದ ಜರುಗಿತು ಭಾನುವಾರ ಗಂಧ ಜರುಗಿತು.

ಸೋಮವಾರ ಉರೂಸ್ ಅಂಗವಾಗಿ ಛಾದರ್ ಹೊದಿಕೆ, ಹೂ, ಕಾಯಿ. ಕರ್ಪೂರ ಸಮರ್ಪಿಸಲಾಯಿತು. ಭಕ್ತರಿಗೆ ಅನ್ನ ಸಂತರ್ಪಣೆ ಮಾಡಲಾಯಿತು. ಈ ಧರ್ಮ ಗುರುಗಳಾದ ಮಂಜೂರು ಪಾಷ, ಹಾಗೂ ಖಾಜಿ ನವಾಜ್ ಪಾಷ, ಮುಸ್ಲಿಂ ಬಾಂದವರು ಇದ್ದರು.

ಅಜೀತ್ ಕುಮಾರ ಹೊನ್ನಟಗಿಯಿಂದ ಬಿಜೆಪಿ ನೂತನ ಜಿಲ್ಲಾ ಪದಾಧಿಕಾರಿಗಳಿಗೆ ಸನ್ಮಾನ



ಸಿರವಾರ:ಜ.5-

ಭಾರತೀಯ ಜನತಾ ಪಾರ್ಟಿಯ ನೂತನ ಜಿಲ್ಲಾ ಪದಾಧಿಕಾರಿಗಳಿಗೆ ಸಿರವಾರ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಪಟ್ಟಣ ಪಂಚಾಯಿತಿ ಸದಸ್ಯರಾದ ಅಜೀತ್ ಕುಮಾರ ಹೊನ್ನಟಗಿ, ಮತ್ತು ಅನಿಲಕುಮಾರ ವಕೀಲರು ಹೊನ್ನಟಗಿ ನೇತೃತ್ವದಲ್ಲಿ ಸನ್ಮಾನಿಸಿ ಗೌರವಿಸಿದರು.

ರಾಯಚೂರು ನೂತನ ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ರವೀಂದ್ರ ಜಲ್ದಾರ್, ಜಿಲ್ಲಾ ಉಪಾಧ್ಯಕ್ಷರಾಗಿ ಮಲ್ಲಿಕಾರ್ಜುನ ಜಕ್ಕಲದಿನ್ನಿ ವಕೀಲರು, ಜಂಬಣ್ಣ ನೀಲಗಲ್, ಜಿಲ್ಲಾ ಕಾರ್ಯದರ್ಶಿಯಾಗಿ ನಾಗಲಿಂಗಸ್ವಾಮಿ ವಕೀಲರು ಜಿಲ್ಲಾ ಪದಾಧಿಕಾರಿಗಳಾಗಿ ಆಯ್ಕೆಯಾಗಿದ್ದಾರೆ. ಈ ಹಿನ್ನಲೆಯಲ್ಲಿ ಎಲ್ಲಾ ನೂತನ ಜಿಲ್ಲಾ ಪದಾಧಿಕಾರಿಗಳಿಗೆ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸನ್ಮಾನ ಮಾಡಿದರು.

ಈ ಸಂದರ್ಭದಲ್ಲಿ ಜೆ.ದೇವರಾಜ ಗೌಡ, ಸಿದ್ದರಾಮಯ್ಯಸ್ವಾಮಿ,ಮಲ್ಲಪ್ಪ ಕಜ್ಜಿ, ಸಂದೀಪ್ ಪಾಟೀಲ್, ನರಸಿಂಹರಾವ್ ಕುಲಕರ್ಣಿ,ಉಮೇಶ್ ಜೇಗರಕಲ್,ಎಂ. ನಾಗರಾಜಗೌಡ,ಜೆ.ಬಸವರಾಜ ಜಾಡಲದಿನ್ನಿ, ರಾಜಪ್ಪ ಹೊನ್ನಟಗಿ,ಅನಿಲ್ ಕುಮಾರ ಹೊನ್ನಟಗಿ ವಕೀಲರು,

3ನೇ ಪುಟಕ್ಕೆ

ಕಲ್ಯಾಣ ಕರ್ನಾಟಕದ ರೈಲ್ವೆ ಅಭಿವೃದ್ಧಿಗೆ 12,900 ಕೋಟಿ ರೂ.ಅನುದಾನ: ಕೇಂದ್ರ ಸಚಿವ ವಿ.ಸೋಮಣ್ಣ

ವಿಜಯನಗರ,ಜ.05-

ಅಭಿವೃದ್ಧಿ ವಿಷಯದಲ್ಲಿ ರಾಜಕಾರಣ ಬೆರೆಸಬಾರದು ಎಂಬುದು ಪ್ರಧಾನಿ ನರೇಂದ್ರ ಮೋದಿಯವರ ಸ್ಪಷ್ಟ ಸಂದೇಶವಾಗಿದೆ. ಕಲ್ಯಾಣ ಕರ್ನಾಟಕ ಭಾಗದ ರೈಲ್ವೆ ಯೋಜನೆಗಳಿಗಾಗಿ ಕೇಂದ್ರ ಸರಕಾರ ಬರೋಬ್ಬರಿ 12,900 ಕೋಟಿ ರೂಪಾಯಿಗಳ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ಎಂದು ಕೇಂದ್ರ ಜಲಶಕ್ತಿ ಹಾಗೂ ರೈಲ್ವೆ ರಾಜ್ಯ ಖಾತೆ ಸಚಿವ ವಿ.ಸೋಮಣ್ಣ ತಿಳಿಸಿದರು.



ರವಿವಾರ ಹಗರಿಬೊಮ್ಮನಹಳ್ಳಿಯಲ್ಲಿ ಲೆವೆಲ್ ಕ್ರಾಸಿಂಗ್ 35ರ ಮೇಲ್ಸೇತುವೆ ಕಾಮಗಾರಿಗೆ ಭೂಮಿ ಪೂಜೆ ಹಾಗೂ ಶಂಕುಸ್ಥಾಪನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಸಚಿವ ವಿ.ಸೋಮಣ್ಣ, ಈ ಭಾಗದ ಅಭಿವೃದ್ಧಿ ಕಾಮಗಾರಿಗಳ ಕುರಿತು ಸಮಗ್ರ ಮಾಹಿತಿ ನೀಡಿದರು.

ಹಿಂದೆ ಕರ್ನಾಟಕಕ್ಕೆ ರೈಲ್ವೆ ಇಲಾಖೆಯಿಂದ ವಾರ್ಷಿಕವಾಗಿ ಕೇವಲ 882 ಕೋಟಿ ರೂ. ಅನುದಾನ ಬರುತ್ತಿತ್ತು. ಆದರೆ ಮೋದಿ ಸರಕಾರ ಬಂದ ನಂತರ ವಾರ್ಷಿಕವಾಗಿ 7,500 ರಿಂದ 8,000 ಕೋಟಿ ರೂ.ಅನುದಾನ ನೀಡಲಾಗುತ್ತಿದೆ ಎಂದು ಸೋಮಣ್ಣ ಅಂಕಿಅಂಶ ಸಹಿತ ವಿವರಿಸಿದರು.

ಬಳ್ಳಾರಿ-ಚಿಕ್ಕಜಾಜೂರು ಜೋಡಿ ಮಾರ್ಗ ಯೋಜನೆಗೆ 2025ರ ಜೂನ್ನಲ್ಲಿ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ. ಸುಮಾರು 3,400 ಕೋಟಿ ರೂ. ವೆಚ್ಚದ ಈ ಯೋಜನೆಯು ಈ ಭಾಗದ ರೈಲ್ವೆ ಸಂಪರ್ಕದಲ್ಲಿ ಕ್ರಾಂತಿಕಾರಿ ಬದಲಾವಣೆ ತರಲಿದೆ ಎಂದು ಸಚಿವರು ತಿಳಿಸಿದರು.

ಹಗರಿಬೊಮ್ಮನಹಳ್ಳಿಯ ಎಲ್.ಸಿ 35ರ ಬದಲಿಗೆ ಗುಂಡಾ ರೋಡ್-ಕೊಟ್ಟೂರು ನಡುವೆ 38.7 ಕೋಟಿ ರೂ. ವೆಚ್ಚದಲ್ಲಿ ಕಾಮಗಾರಿ ನಡೆಯುತ್ತಿದೆ. ಎಲ್.ಸಿ 37 ಮತ್ತು 38ರ ಕಾಮಗಾರಿಗಳಿಗೂ ಚಾಲನೆ ನೀಡಲಾಗಿದೆ. ಹೊಸಪೇಟೆ ಟಿ.ಬಿ ಡ್ಯಾಂ ಬಳಿ ಬಸ್ಗಳು ನಿಲ್ಲಲು ಕಷ್ಟವಾಗುತ್ತಿದ್ದು, ಅಲ್ಲಿ ಮೇಲ್ಸೇತುವೆ ನಿರ್ಮಿಸಲಾಗುವುದು. ಹೊಸಪೇಟೆ-ಹಂಪಿ ರಸ್ತೆಯ (ಎಲ್.ಸಿ 85) ಕಾಮಗಾರಿಗೆ 26 ಕೋಟಿ ರೂ. ಮಂಜೂರಾಗಿದ್ದು, ಜೂನ್ ಒಳಗಾಗಿ ಪೂರ್ಣಗೊಳ್ಳಲಿದೆ. ಹೊಸಪೇಟೆ ರೈಲ್ವೆ ನಿಲ್ದಾಣವನ್ನು 15.17 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದ್ದು, ಈಗಾಗಲೇ ಶೇ. 80ರಷ್ಟು ಕಾಮಗಾರಿ ಪೂರ್ಣಗೊಂಡಿದೆ ಎಂದು ಸೋಮಣ್ಣ ಹೇಳಿದರು.

ಹಂಪಾಪಟ್ಟಣ ಮತ್ತು ಹಗರಿಬೊಮ್ಮನಹಳ್ಳಿ ಸಂಪರ್ಕಕ್ಕೆ ಅಗತ್ಯವಿರುವ 1 ಎಕರೆ 41 ಗುಂಟೆ ಜಮೀನನ್ನು ಭೂಸ್ವಾಧೀನ ಪಡಿಸಿಕೊಳ್ಳಲು ವಿಳಂಬ ಮಾಡದಂತೆ ಜಿಲ್ಲಾಧಿಕಾರಿಗಳಿಗೆ ಸಚಿವರು ವೇದಿಕೆಯಲ್ಲೇ ಸೂಚನೆ ನೀಡಿದರು. ರೈಲ್ವೆ ಕಾಮಗಾರಿಗಳಿಗೆ ಅಗತ್ಯವಿರುವ ಅನುಮತಿಗಳನ್ನು ತ್ವರಿತವಾಗಿ ನೀಡುವಂತೆ ಜಿಲ್ಲಾಡಳಿತಕ್ಕೆ ತಾಕೀತು ಮಾಡಿದರು.

ಈ ವೇಳೆ ಮಾತನಾಡಿದ ಸಂಸದರಾದ ಈ.ತುಕಾರಾಂ, ವಿಜಯನಗರ ಹಾಗೂ ಬಳ್ಳಾರಿ ಜಿಲ್ಲೆಯಲ್ಲಿ ಹೆಚ್ಚು ಗಣಿಗಾರಿಕೆ ನಡೆಯುತ್ತಿದೆ ಮತ್ತು ಹಲವು ಕಾರ್ಖಾನೆಗಳಿವೆ. ಜೊತೆಗೆ ಪ್ರವಾಸೋದ್ಯಮದಲ್ಲಿ ಅವಳಿ ಜಿಲ್ಲೆ ಮುಂಚೂಣಿಯಲ್ಲಿದ್ದು ರೈಲ್ವೆ ಡಬ್ಲಿಂಗ್ ಸೇರಿದಂತೆ ವಿದ್ಯುದ್ದೀಕರಣ, ಮೇಲ್ಸೇತುವೆ, ಕೆಳಸೇತುವೆಗಳ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬೇಕು ಎಂದು ರೈಲ್ವೆ ಸಚಿವರಿಗೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಶಾಸಕ ನೇಮಿರಾಜ್ ನಾಯಕ್, ಜಿಲ್ಲಾಧಿಕಾರಿ ಕವಿತಾ ಎಸ್.ಮನ್ನಿಕೇರಿ, ಪೊಲೀಸ್ ಅಧೀಕ್ಷಕಿ ಎಸ್.ಜಹ್ನಾವಿ, ಮಾಜಿ ಶಾಸಕರಾದ ಚಂದ್ರಾನಾಯ್ಕ್, ಸ್ವಾಮೀಜಿಗಳಾದ ಮರಿಯಮ್ಮನಹಳ್ಳಿ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ, ಡಾ: ಮಹೇಶ್ವರ ಸ್ವಾಮೀಜಿ, ಹೆಚ್.ಬಿ.ಹಳ್ಳಿ ಹಾಲ್ ಸಿದ್ದೇಶ್ವರ ಸ್ವಾಮೀಜಿ, ರೈಲ್ವೆ ಇಲಾಖೆಯ ಸಿಇಓ ಅಜೆಯಶರ್ಮ, ಎಡಿಆರ್ ಎಂ ವಿಷ್ಣುಭೂಷಣ್ ಹಾಗೂ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಸಿಸಿ ರಸ್ತೆ ಕಾಮಗಾರಿಗೆ ಶಾಸಕ ಅಲ್ಲಮಪ್ರಭು ಪಾಟೀಲ್ ಚಾಲನೆ



ಕಲಬುರಗಿ,ಜ.05-

ನಗರದ ಶ್ರೀ ಮಹಾಂತೇಶ್ವರ ಕಾಲೋನಿಯಲ್ಲಿ ಕೆಕೆಆರ್ಡಿಬಿ ಅನುದಾನದಲ್ಲಿ 40 ಲಕ್ಷ ರೂಪಾಯಿ ವೆಚ್ಚದ ಸಿಸಿ ರಸ್ತೆ ಕಾಮಗಾರಿಗೆ ದಕ್ಷಿಣ ಮತಕ್ಷೇತ್ರದ ಶಾಸಕರಾದ ಅಲ್ಲಮಪ್ರಭು ಪಾಟೀಲ್ ಅವರು ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮುಖಂಡರಾದ ಸಿವಿ ಪಾಟೀಲ್, ಧರ್ಮರಾಜ್ ಹೇರೂರ್, ಶರಣಗೌಡ ಪಾಟೀಲ್, ಶರಣು ಬಿರಾದಾರ್, ಪರಮೇಶ್ವರ ದೇಸಾಯಿ, ಸೋಮಶೇಖರ್ ಮಠ, ಶಿವರಾಜ್ ನಾಯಕ್, ಬಸವಗೌಡ ಪಾಟೀಲ್, ಮಲ್ಲಿಕಾರ್ಜುನ್ ದೇಸಾಯಿ, ಶರಣು ಬಂದರವಾಡ, ಶಿವಶರಣಪ್ಪ ಜಮಾದಾರ್, ಶಿವಾನಂದಯ್ಯ ಹಿರೇಮಠ್, ಹನುಮಂತರಾಯ ಕಪ್ಪನೂರ್, ಮಹಾಂತಪ್ಪ ಜಮಾದಾರ್, ಶರಣಯ್ಯ ಸಾಗರಮಠ, ಮನೋಜ್ ಕಪನೂರ, ಗುರುದೇವ್ ವಿಶ್ವಕರ್ಮ, ಉಮೇಶ್ ಜಾದವ್, ಸಿದ್ದರಾಮ ಸೋಮು, ಬಸವರಾಜ್ ಜಯಪ್ಪಗೌಡ, ಗೌತಮ್ ಕಳಸ್ಕರ್, ಶಿವರಾಜ ಸುತಾರ್, ಶಿವರುದ್ರಯ್ಯ ಸಂದಿಮನಿ, ಕಿರಣ್ ಕುಲ್ಕಾಣಿ, ಸಂತೋಷ್ ಹಿರೇಮಠ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಸಾವಿತ್ರಿಬಾಯಿ ಫುಲೆ ಸಾಂಸ್ಕೃತಿಕ ಮಹಿಳಾ ಸಂಘದಿಂದ ಸಾವಿತ್ರಿಬಾಯಿ ಫುಲೆ ಜನ್ಮ ದಿನಾಚರಣೆ

ಭಾಲ್ಕಿ ,ಜ.05-

ತಾಲೂಕಿನ ವಳಸಂಗ ಗ್ರಾಮದಲ್ಲಿ ಸಾವಿತ್ರಿಬಾಯಿ ಫುಲೆ ಸಾಂಸ್ಕೃತಿಕ ಮಹಿಳಾ ಸಂಘದ ವತಿಯಿಂದ ಸಾವಿತ್ರಿಬಾಯಿ ಫುಲೆ ಅವರ ಜನ್ಮ ದಿನಾಚರಣೆಯನ್ನು ಆಚರಿಸಲಾಯಿತು.



ಕಾರ್ಯಕ್ರಮದಲ್ಲಿ ಸಾವಿತ್ರಿಬಾಯಿ ಫುಲೆ ಸಾಂಸ್ಕೃತಿಕ ಮಹಿಳಾ ಸಂಘದ ಸದಸ್ಯರು ಬುದ್ಧ, ಬಸವ, ಅಂಬೇಡ್ಕರ್ ಹಾಗೂ ಫುಲೆ ದಂಪತಿಗಳ ಬಗ್ಗೆ ಭಜನೆ ಹಾಡುವ ಮೂಲಕ ಮಹಾನ್ ವ್ಯಕ್ತಿಗಳ ತತ್ವ ಸಿದ್ಧಾಂತ ತಿಳಿಸಿದರು.

ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷೆ ದ್ರೌಪತಿ ಗಾಯಕವಾಡ್, ಜನಾಬಾಯಿ, ಅಲ್ಲಿಕಾ, ಇಂದುಮತಿ, ವಿಮಲಾಬಾಯಿ, ಗೌರಮ್ಮ, ಮುತ್ತಮ್ಮ, ಉಮೇಶ್ ಗಾಯಕವಾಡ್, ಸಚಿನ್, ಭೀಮ್, ಧನರಾಜ್ ಸೇರಿದಂತೆ ಗ್ರಾಮದ ಇತರ ಮುಖಂಡರು ಉಪಸ್ಥಿತರಿದ್ದರು.

18 ವರ್ಷದೊಳಗಿನ ಮಕ್ಕಳ ಮೇಲಿನ ದೌರ್ಜನ್ಯಕ್ಕೆ ಪೋಕ್ಸೋ ಕಾಯ್ದೆಯಡಿ ಕಠಿಣ ಶಿಕ್ಷೆ : ನ್ಯಾ.ಕರಣ ಗುಜ್ಜರ್

ಚಿತ್ತಾಪುರ,ಜ.05-

18 ವರ್ಷಗಳೊಳಗಿನ ಮಕ್ಕಳ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯ ಪ್ರಕರಣಗಳಿಗೆ ಪೋಕ್ಸೋ ಕಾಯ್ದೆಯಡಿ ಅಪರಾಧಿಗಳಿಗೆ ಕಠಿಣ ಶಿಕ್ಷೆ ವಿಧಿಸಲಾಗುತ್ತದೆ ಎಂದು ನಾಲ್ಕನೇ ಹೆಚ್ಚುವರಿ ಜಿಲ್ಲಾ ನ್ಯಾಯಧೀಶ ಕರಣ ಗುಜ್ಜರ್ ಹೇಳಿದರು.



ಪಟ್ಟಣದ ಅಣ್ಣೇಮ್ಮ ಗೊಬ್ಬೂರ ಪ್ರೌಢ ಶಾಲೆಯಲ್ಲಿ ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ ಹಾಗೂ ಶಿಶು ಅಭಿವೃದ್ಧಿ ಇಲಾಖೆಯ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಪೋಕ್ಸೋ ಕಾಯ್ದೆ ಕುರಿತು ಕಾನೂನು ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪೋಕ್ಸೋ ಕಾಯ್ದೆಯು 18 ವರ್ಷಗಳೊಳಗಿನ ಮಕ್ಕಳ ಸುರಕ್ಷತೆಗಾಗಿ ಜಾರಿಗೆ ತರಲಾಗಿದೆ. ಇತ್ತೀಚಿನ ದಿನಗಳಲ್ಲಿ ಮಕ್ಕಳು ದುಶ್ಚಟಗಳು ಹಾಗೂ ಮೊಬೈಲ್ ತಂತ್ರಜ್ಞಾನದ ದುರ್ಬಳಕೆಗೆ ಒಳಗಾಗಿ ತಮ್ಮ ಭವಿಷ್ಯವನ್ನು ಹಾಳು ಮಾಡಿಕೊಳ್ಳುತ್ತಿರುವುದು ಆತಂಕಕಾರಿ ಸಂಗತಿ ಎಂದು ಹೇಳಿದರು.

ಮಕ್ಕಳು ದುಶ್ಚಟಗಳು ಹಾಗೂ ಅನಾವಶ್ಯಕ ಮೊಬೈಲ್ ಬಳಕೆಯಿಂದ ದೂರವಿದ್ದು, ಅಗತ್ಯವಿದ್ದಾಗ ಮಾತ್ರ ಶೈಕ್ಷಣಿಕ ಮತ್ತು ಸಾಮಾನ್ಯ ಜ್ಞಾನಕ್ಕಾಗಿ ಮೊಬೈಲ್ ಬಳಸಬೇಕು. ಉತ್ತಮ ಶಿಕ್ಷಣ ಪಡೆದು ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಲು ಹೆಚ್ಚಿನ ಗಮನ ಹರಿಸಬೇಕು ಎಂದು ಸಲಹೆ ನೀಡಿದರು.

ಪೋಕ್ಸೋ ಕಾಯ್ದೆ ಕುರಿತು ಯುವ ಸಮುದಾಯಕ್ಕೆ ನ್ಯಾಯಾಲಯದಲ್ಲಿ ಉಚಿತವಾಗಿ ಮಾಹಿತಿ ನೀಡಲಾಗುತ್ತಿದೆ. ಈ ಸೌಲಭ್ಯವನ್ನು ಯುವಕರು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಅವರು ಕರೆ ನೀಡಿದರು.

ಈ ಸಂದರ್ಭದಲ್ಲಿ ಸಿವಿಲ್ ನ್ಯಾಯಧೀಶ ಅಭಿಷೇಕ ಜೋಷಿ, ಸಿಡಿಪಿಓ ಆರತಿ ತುಪ್ಪದ ಮಾತನಾಡಿದರು. ನ್ಯಾಯವಾದಿ ಮಂಜುಳಾ ಸರಡಗಿ ಅವರು ಪೋಕ್ಸೋ ಕಾಯ್ದೆ ಕುರಿತು ವಿವರವಾದ ಉಪನ್ಯಾಸ ನೀಡಿದರು. ಇದೇ ವೇಳೆ ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮೀ ಚೌಧರಿ ಅವರು ಮಕ್ಕಳೊಂದಿಗೆ ಪೋಕ್ಸೋ ಕಾಯ್ದೆ ಕುರಿತು ಸಂವಾದ ನಡೆಸಿ ಮಾಹಿತಿ ನೀಡಿ ದರು.

ಕಾರ್ಯಕ್ರಮದಲ್ಲಿ ಅಪರ ಜಿಲ್ಲಾ ಸರ್ಕಾರಿ ವಕೀಲ ವಿ.ಆರ್. ಕಾಂತಾ, ಸಹಾಯಕ ಸರ್ಕಾರಿ ಅಭಿಯೋಜಕಿ ಅಂಜನಾದೇವಿ, ವಕೀಲರ ಸಂಘದ ಅಧ್ಯಕ್ಷ ಸೋಮಶೇಖರ ಕರದಳ್ಳಿ, ಪುರಸಭೆ ಮುಖ್ಯಾಧಿಕಾರಿ ಮನೋಜಕುಮಾರ ಗುರಿಕಾರ, ನ್ಯಾಯವಾದಿಗಳಾದ ಚಂದ್ರಶೇಖರ ಅವಂಟಿ, ಭೀಮಶಪ್ಪ ವಾಡಿ, ಮಲ್ಲಿಕಾರ್ಜುನ ಹೊನಗುಂಟಿ, ಮುಖ್ಯಗುರು ಕಸ್ತೂರಿ ಪಾಟೀಲ್, ದೇವೇಂದ್ರಪ್ಪ ಇಮಾಡಾಪುರ, ಎಎಸ್ಐ ವಿಠ್ಠಲ್ ಬಿರಾದಾರ, ಶರಣಬಸಪ್ಪ ಬಮ್ಮನಳ್ಳಿ, ಗೀತಾ ಸೊಲಗೆ, ಲಲಿತಾ ರೆಡ್ಡಿ, ಮನೋಹರ ಹಡಪದ, ಶೈಲಜಾ ಹರಸೂರ, ಅಂಬರೀಶ, ಬಸಮ್ಮ, ಸೈಯದ ಸಲೀಂ, ನಾಗರಾಜ ಕುಲಕರ್ಣಿ, ಕಾಶಿಬಾಯಿ ಸೇರಿದಂತೆ ಹಲವರು ಉಪಸ್ಥಿತರಿದ್ದರು. ಸಂಜನಾ ಹಿರೆಮಠ ಪ್ರಾರ್ಥನೆಗೀತೆ ಹಾಡಿದರು. ಚಂದ್ರಶೇಖರ ನಾಲವಾರ ಸ್ವಾಗತಿಸಿದರು.ನರಸಪ್ಪ ಚಿನ್ನಾಕಟ್ಟಿ ಕಾರ್ಯಕ್ರಮ ನಿರೂಪಿಸಿದರು.

ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ : ಹೆಸ್ಕಾಂ ಅಧಿಕಾರಿಗಳು ಗೈರು: ಆಕ್ರೋಶ

ಹುನಗುಂದ,ಜ.05-

ವಿದ್ಯುತ್ ಗ್ರಾಹಕರ ಕುಂದುಕೊರತೆ ಸಭೆಗೆ ಹೆಸ್ಕಾಂ ಅಧಿಕಾರಿಗಳು ಬಾರದೆ ಲೈನ್ಮ್ಯಾನ್ಗಳನ್ನು ಕಳುಹಿಸುವುದು ಸರಿಯಲ್ಲ' ಎಂದು ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಸಮಿತಿ ತಾಲ್ಲೂಕು ಘಟಕದ ಅಧ್ಯಕ್ಷ ನೂರಂದಗೌಡ ಕಲಗೋಡಿ ಆಕ್ರೋಶ ವ್ಯಕ್ತಪಡಿಸಿದರು.



ಪಟ್ಟಣದ ತಾಲ್ಲೂಕು ಪಂಚಾಯಿತಿ ಸಭಾಭವನದಲ್ಲಿ ಶನಿವಾರ ನಡೆದ ತಾಲ್ಲೂಕು ಮಟ್ಟದ ಪಂಚ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಗ್ರಾಮೀಣ ಪ್ರದೇಶಗಳ ಸಾರ್ವಜನಿಕರಿಂದ ವಿದ್ಯುತ್ಗೆ ಸಂಬಂಧಿಸಿದ ದೂರುಗಳು ಹೆಚ್ಚಿನ ಪ್ರಮಾಣದಲ್ಲಿ ಸಲ್ಲಿಕೆಯಾಗುತ್ತಿವೆ. ಸಾರ್ವಜನಿಕರು ತಮ್ಮ ಸಮಸ್ಯೆ ಪರಿಹರಿಸಿಕೊಳ್ಳಲೆಂದು ಸಭೆಗೆ ಬರುತ್ತಾರೆ. ಅಧಿಕಾರಿಗಳು ಇರದಿದ್ದರೆ ಉತ್ತರ ಕೊಡುವವರು ಯಾರು? ಅಧಿಕಾರಿಗಳು ತಮ್ಮ ಜವಾಬ್ದಾರಿ ಅರಿತು ನಡೆಯಬೇಕು' ಎಂದರು.

ಹುನಗುಂದ ಬಸ್ ಘಟಕದ ವ್ಯವಸ್ಥಾಪಕ ಅರವಿಂದ ಭಜಂತ್ರಿ ಮಾತನಾಡಿ, ಘಟಕದಲ್ಲಿ ಬಸ್ ಕೊರತೆಯಿದೆ. ಈಗಾಗಲೇ ಇಳಕಲ್ ಘಟಕಕ್ಕೆ ಹೊಸ ಎಲೆಕ್ಟ್ರಿಕಲ್ ಬಸ್ ಬಂದಿದ್ದು, ಹುನಗುಂದ ಘಟಕಕ್ಕೆ ಕೊಟ್ಟಿಲ್ಲ' ಎಂದು ಹೇಳಿದರು. ಈ ಬಗ್ಗೆ ಶಾಸಕರೊಂದಿಗೆ ಮಾತನಾಡುವುದಾಗಿ ಕಲಗೋಡಿ ಎಂದರು.

ಶಿಶು ಅಭಿವೃದ್ಧಿ ಯೋಜನಾಧಿಕಾರಿ ಮುತ್ತಣ್ಣ ಅರಳಿ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು, ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯರು ಇದ್ದರು.

ಹುನಗುಂದ ತಾಲ್ಲೂಕು ಪಂಚಾಯತಿ ಸಭಾಭವನದಲ್ಲಿ ತಾಲ್ಲೂಕು ಮಟ್ಟದ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಸಮಿತಿ ಅಧ್ಯಕ್ಷ ನೂರಂದಗೌಡ (ಮುತ್ತಣ್ಣ) ಕಲಗೋಡಿ ಅಧ್ಯಕ್ಷತೆಯಲ್ಲಿ ಪ್ರಗತಿ ಪರಿಶೀಲನೆ ಸಭೆ ನಡೆಯಿತು

ಹುನಗುಂದ ತಾಲ್ಲೂಕು ಪಂಚಾಯತಿ ಸಭಾಭವನದಲ್ಲಿ ತಾಲ್ಲೂಕು ಮಟ್ಟದ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಸಮಿತಿ ಅಧ್ಯಕ್ಷ ನೂರಂದಗೌಡ (ಮುತ್ತಣ್ಣ) ಕಲಗೋಡಿ ಅಧ್ಯಕ್ಷತೆಯಲ್ಲಿ ಪ್ರಗತಿ ಪರಿಶೀಲನೆ ಸಭೆ ನಡೆಯಿತು

ಗ್ಯಾರಂಟಿ: ಸಮಸ್ಯೆ ಪರಿಹರಿಸಿ'

ಹೆಸ್ಕಾಂ ಎಇಇ ಈವರೆಗೆ ಸಭೆಗೆ ಹಾಜರಾಗಿಲ್ಲ. ಸಾರ್ವಜನಿಕರು ಮತ್ತು ಅಧಿಕಾರಿಗಳ ನಡುವೆ ಸಂಪರ್ಕ ಕೊರತೆ ಉಂಟಾಗುತ್ತಿದೆ. ಅಮೀನಗಡ

ಕಮತಗಿ ಹಾಗೂ ಹುನಗುಂದ ಪಟ್ಟಣ ವ್ಯಾಪ್ತಿಯ ಅಂಗನವಾಡಿ ಕೇಂದ್ರಗಳ ಮೇಲ್ವಿಚಾರಕರು ಕುಂದುಕೊರತೆ ಸಭೆ ಆಯೋಜಿಸಿ ಗ್ಯಾರಂಟಿ ಯೋಜನೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಬೇಕು' ಎಂದು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಮುರುಳಿಧರ ದೇಶಪಾಂಡೆ ಸೂಚಿಸಿದರು.

ಬೀದರ್: ಡಾ. ಕೆ.ಎಲ್. ಕೃಷ್ಣಮೂರ್ತಿ ಸ್ಮರಣಾರ್ಥ ಉಚಿತ ವೈದ್ಯಕೀಯ ಶಿಬಿರ



ಬೀದರ್,ಜ.05-

ಡಾ. ಕೃಷ್ಣಮೂರ್ತಿ ಆಸ್ಪತ್ರೆ ವತಿಯಿಂದ ದಿವಂಗತ ಡಾ. ಕೆ.ಎಲ್. ಕೃಷ್ಣಮೂರ್ತಿ ಅವರ ಸ್ಮರಣಾರ್ಥವಾಗಿ ರವಿವಾರ ನಗರದ ಜೆಪಿ ನಗರದಲ್ಲಿರುವ ಬ್ರಹ್ಮಕುಮಾರೀಸ್ ಸೆಂಟರ ಪಾವನ್ ಧಾಮ್ನಲ್ಲಿ ಉಚಿತ ವೈದ್ಯಕೀಯ ಶಿಬಿರವನ್ನು ಆಯೋಜಿಸಲಾಯಿತು.

ಪಾವನ್ ಧಾಮ್ ಕೇಂದ್ರದ ಸಂಚಾಲಕಿ ಬಿ.ಕೆ. ಪ್ರತಿಮಾ ಬಹೆನಜಿ ಅವರು ಶಿಬಿರದ ಉದ್ಘಾಟನೆ ನೆರವೇರಿಸಿದರು.

ಶಿಬಿರದಲ್ಲಿ ನಾಡಿ ಆಮ್ಲಜನಕದ ಶುದ್ಧತ್ವ, ರಕ್ತದೊತ್ತಡ, ರಕ್ತದ ಗ್ಲೂಕೋಸ್, ರಕ್ತದ ಗುಂಪು, ಮೂಳೆ ಖನಿಜ ಸಾಂದ್ರತೆ, ಮಧುಮೇಹ ನ್ಯೂರೋಪತಿ ಪರೀಕ್ಷೆ, ತೂಕ ಹಾಗೂ ಬಿಎಂಐ ಸೇರಿದಂತೆ ವಿವಿಧ ಸಾಮಾನ್ಯ ಆರೋಗ್ಯ ತಪಾಸಣೆಗಳನ್ನು ತಜ್ಞ ವೈದ್ಯರ ಮೇಲ್ವಿಚಾರಣೆಯಲ್ಲಿ ಉಚಿತವಾಗಿ ನಡೆಸಲಾಯಿತು.

ಶಿಬಿರಕ್ಕೆ ಆಗಮಿಸಿದ ರೋಗಿಗಳಿಗೆ ವೈದ್ಯರು ಅಗತ್ಯ ಆರೋಗ್ಯ ಸಲಹೆಗಳನ್ನು ನೀಡಿ, ಮಧುಮೇಹ, ರಕ್ತದೊತ್ತಡ ಸೇರಿದಂತೆ ಇತರ ದೀರ್ಘಕಾಲಿಕ ರೋಗಗಳ ಬಗ್ಗೆ ಜಾಗೃತಿ ಮೂಡಿಸಿದರು. ಸಾರ್ವಜನಿಕ ಆರೋಗ್ಯ ಕಾಪಾಡುವ ಉದ್ದೇಶದಿಂದ ಈ ಶಿಬಿರವನ್ನು ಹಮ್ಮಿಕೊಳ್ಳಲಾಗಿದ್ದು, ಮುಂದಿನ ದಿನಗಳಲ್ಲಿ ಸಹ ಇಂತಹ ಸೇವಾ ಕಾರ್ಯಕ್ರಮಗಳನ್ನು ಮುಂದುವರಿಸಲಾಗುವುದು ಎಂದು ಡಾ. ಕೆ.ಎಲ್. ಕೃಷ್ಣಮೂರ್ತಿ ಆಸ್ಪತ್ರೆಯ ಡಾ. ರಘು ಕೃಷ್ಣಮೂರ್ತಿ ಅವರು ತಿಳಿಸಿದರು.

ಈ ಉಚಿತ ವೈದ್ಯಕೀಯ ಶಿಬಿರದಲ್ಲಿ ಜಿಲ್ಲೆಯ ಸುಮಾರು 200 ಜನರು ಸದುಪಯೋಗ ಪಡೆದುಕೊಂಡರು. ಕಾರ್ಯಕ್ರಮದ ನಿರೂಪಣೆಯನ್ನು ಬಿ.ಕೆ ಗುರುದೇವಿ ಬಹೆನಜಿ ಮಾಡಿದರು. ಬಿ.ಕೆ ಮಂಗಲಾ ಬಹೆನಜಿ ಅವರು ಸ್ವಾಗತ ಕೋರಿದರು.

ರೈತ ನಾಯಕರ ಬಿಡುಗಡೆಗೆ ಎಐಕೆಕೆಎಂಎಸ್ ಆಗ್ರಹ

ಕಲಬುರಗಿ,ಜ.05-

ವಿಜಯಪುರದಲ್ಲಿ ಸರಕಾರಿ ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆ ಸ್ಥಾಪನೆಗೆ ಆಗ್ರಹಿಸಿ ಹಾಗೂ ಸರಕಾರ ಜಾರಿಗೊಳಿಸಲು ಹೊರಟಿರುವ ಪಿಪಿಪಿ (ಸಾರ್ವಜನಿಕ-ಖಾಸಗಿ ಸಹಭಾಗಿತ್ವ) ಮಾದರಿಯನ್ನು ವಿರೋಧಿಸಿ ಹೋರಾಟ ನಡೆಸುತ್ತಿದ್ದ ವೇಳೆ ಎಐಕೆಕೆಎಂಎಸ್ ರೈತ ಸಂಘಟನೆಯ ಅಖಿಲ ಭಾರತ ಮಂಡಳಿ ಸದಸ್ಯ ಬಿ.ಭಗವಾನರೆಡ್ಡಿ, ಅನೀಲ್ ಹೊಸಮನಿ ಸೇರಿದಂತೆ ಇತರ ಹೋರಾಟಗಾರರನ್ನು ಪೊಲೀಸರು ಬಂಧಿಸಿರುವ ಕ್ರಮವನ್ನು ಎಐಕೆಕೆಎಂಎಸ್ ಹಲಕರಟಿ ಗ್ರಾಮ ಘಟಕದ ಪದಾಧಿಕಾರಿಗಳು ಖಂಡಿಸಿದ್ದಾರೆ.



ಈ ಕುರಿತು ಹಲಕರಟಿ ಗ್ರಾ.ಪಂ ಪಿಡಿಓ ಗೋಪಾಲ ಕಟ್ಟಿಮನಿ ಮತ್ತು ಅಧ್ಯಕ್ಷ ಸಿದ್ದುಗೌಡ ಪಾಟೀಲ ಅವರ ಮೂಲಕ ರಾಜ್ಯ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರಿಗೆ ಮನವಿ ಸಲ್ಲಿಸಿ, ಬಂಧಿತ ನಾಯಕರನ್ನು ತಕ್ಷಣವೇ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿದ್ದಾರೆ.

ಸರಕಾರ ಜನರ ನ್ಯಾಯಸಮ್ಮತ ಬೇಡಿಕೆಗಳನ್ನು ನಿರಂತರವಾಗಿ ನಿರ್ಲಕ್ಷಿಸಿದ ಹಿನ್ನೆಲೆಯಲ್ಲಿ, ಹಲವು ದಿನಗಳಿಂದ ವಿಜಯಪುರದಲ್ಲಿ ಶಾಂತಿಯುತವಾಗಿ ಹೋರಾಟ ನಡೆಯುತ್ತಿತ್ತು. ಈ ಚಳವಳಿಗೆ ವಿಜಯಪುರ ಜಿಲ್ಲೆಯಾದ್ಯಂತ ವ್ಯಾಪಕ ಜನಬೆಂಬಲ ಲಭಿಸಿತ್ತು. ಶುಕ್ರವಾರ ವಿಜಯಪುರದ ಉಸ್ತುವಾರಿ ಸಚಿವರ ನಿವಾಸದ ಮುಂದೆ ಪ್ರತಿಭಟನೆ ನಡೆಸುತ್ತಿದ್ದ ಸಂದರ್ಭದಲ್ಲಿ, ಕಾಮ್ರೇಡ್ ಭಗವಾನ್ ರೆಡ್ಡಿ, ಅನೀಲ್ ಹೊಸಮನಿ ಸೇರಿದಂತೆ ಇತರ ನಾಯಕರನ್ನು ಪೊಲೀಸರು ಅಕ್ರಮವಾಗಿ ಬಂಧಿಸುವ ಮೂಲಕ ಜಾಮೀನು ರಹಿತ ಸೆಕ್ಷನ್ಗಳನ್ನು ಒಳಗೊಂಡ ಸುಳ್ಳು ಮತ್ತು ಕೃತಕ ಪ್ರಕರಣಗಳನ್ನು ದಾಖಲಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಇದು ಹೋರಾಟಗಳನ್ನು ಹತ್ತಿಕ್ಕುವ ಸರಕಾರದ ಷಡ್ಯಂತ್ರವಾಗಿದೆ ಎಂದು ಸಂಘಟಕರು ಆರೋಪಿಸಿದ್ದಾರೆ.

ಜನರಿಗೆ ಲಭ್ಯವಾಗಬೇಕಾದ ಸಾರ್ವಜನಿಕ ಆರೋಗ್ಯ ಸೇವೆಗಾಗಿ ನಡೆಯುತ್ತಿರುವ ಜನಾಂದೋಲನವನ್ನು ಕುಗ್ಗಿಸಲು ಕಾಂಗ್ರೆಸ್ ಸರಕಾರ ಅತ್ಯಂತ ಹೀನ ಮತ್ತು ಅಧಿಕಾರಶಾಹಿ ಕ್ರಮ ಅನುಸರಿಸಿದೆ. ಜನರನ್ನು ಭಯಭೀತಗೊಳಿಸಿ ಹೋರಾಟಗಳು ಇನ್ನಷ್ಟು ವ್ಯಾಪಿಸುವುದನ್ನು ತಡೆಯುವುದೇ ಈ ಬಂಧನದ ಉದ್ದೇಶವಾಗಿದೆ. ಬಂಧನಕ್ಕೊಳಗಾಗಿರುವ ಕಾಮ್ರೇಡ್ ಭಗವಾನ್ ರೆಡ್ಡಿ ಅವರು ವಿಜಯಪುರ ಜಿಲ್ಲೆ ಸೇರಿದಂತೆ ಕರ್ನಾಟಕದಾದ್ಯಂತ ಹಲವು ಜನಪರ ಹೋರಾಟಗಳ ಮುಂಚೂಣಿಯಲ್ಲಿದ್ದು, ಖಾಸಗೀಕರಣದ ವಿರುದ್ಧ ಹಾಗೂ ಸಾರ್ವಜನಿಕ ಹಿತಾಸಕ್ತಿಗಾಗಿ ಸದಾ ಹೋರಾಡಿಕೊಂಡು ಬಂದಿದ್ದಾರೆ. ಇಂತಹ ನಾಯಕರನ್ನು ಗುರಿಯಾಗಿಸುವುದು ಸರಕಾರದ ಜನವಿರೋಧಿ ಮತ್ತು ಕಾರ್ಪೊರೇಟ್ ಪರ ಧೋರಣೆಯನ್ನು ಬಹಿರಂಗಪಡಿಸುತ್ತದೆ ಎಂದು ದೂರಿದ್ದಾರೆ.

ಬಂಧಿತ ಹೋರಾಟಗಾರರನ್ನು ಬೇಷರತ್ತಾಗಿ ಬಿಡುಗಡೆ ಮಾಡಬೇಕು. ಇಲ್ಲದಿದ್ದರೆ ರಾಜ್ಯಾದ್ಯಂತ ತೀವ್ರ ಹೋರಾಟಕ್ಕೆ ಮುಂದಾಗಬೇಕಾಗುತ್ತದೆ ಎಂದು ಎಐಕೆಕೆಎಂಎಸ್ ರೈತ ಸಂಘಟನೆಯ ಅಧ್ಯಕ್ಷ ಭೀಮಪ್ಪ ಮಾಟ್ನಳ್ಳಿ, ಕಾರ್ಯದರ್ಶಿ ಸಾಬಣ್ಣ ಸುಣಗಾರ ಸರಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.

ಒಂದನೇಯ ಪುಟದಿಂದ

ವಿನಃ ಕಾರಣ ನನ್ನ ಮೇಲೆ ಆರೋಪ-ಅಂಬೋಜಿ ರಾವ್

ಗೌರವವನ್ನು ಕಾಪಾಡಲು ಆ ಆಮಿಷವನ್ನು ತಿರಸ್ಕರಿಸಿದ್ದಾರೆ. ಇದರಿಂದ ಪ್ರೇರಿತರಾಗಿ ಸಾರ್ವಜನಿಕರು ದೂರವಾಣಿ ಮೂಲಕ ಧನ್ಯವಾದ ಸಲ್ಲಿಸಿದ್ದು, ಮುಂದೆಯೂ ಸಾರ್ವಜನಿಕ ಹಿತಕ್ಕಾಗಿ ಹೋರಾಟ ಮುಂದುವರಿಸಬೇಕೆಂದು ಸಲಹೆ ನೀಡಿದ್ದಾರೆ.

ಹಣದ ಆಮಿಷ ತಿರಸ್ಕರಿಸಿದ ಹಿನ್ನೆಲೆಯಲ್ಲಿ, ಅವರ ಮತ್ತು ಪತ್ನಿಯ ಆಧಾರ ಕಾರ್ಡ್, ವಂಶಾವಳಿ ಮತ್ತು ಮರಣ ಪ್ರಮಾಣ ಪತ್ರಗಳನ್ನು ದುರುಪಯೋಗಪಡಿಸಿ ನಕಲಿ ದಾಖಲೆಗಳನ್ನು ಸೃಷ್ಟಿಸಲಾಗಿದೆ. ಶಿಷ ಸಂಬಂಧ ರಾಯಚೂರು ಆಯುಕ್ತರ ಕಚೇರಿಯಿಂದ ನೋಟಿಸ್ ಬಂದಿದೆ. ಅಂಬಾಜಿ ರಾವ್ ಸ್ವತಃ ಲಿಖಿತವಾಗಿ ಆಯುಕ್ತರಿಗೆ ಪತ್ರ ಬರೆದು, ಮೋಸ ಮಾಡಿದವರ ಹೆಸರಿನ ಮೇಲೆ ಆಸ್ತಿ ದಾಖಲು ಮಾಡಬೇಕು ಮತ್ತು ತಮ್ಮ ವಿರುದ್ಧ ದುರುಪಯೋಗ ಮಾಡಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ದೂರು ಸಲ್ಲಿಸಿದ್ದಾರೆ.

ಅಂಬಾಜಿ ರಾವ್, ಭೀಮ್ ಆರ್ಮಿ ಜಿಲ್ಲಾಧ್ಯಕ್ಷ ಪ್ರವೀಣ ಕುಮಾರ ಅವರು 31-12-2025 ರಂದು ತಮ್ಮ ವಿರುದ್ಧ ಮಾಡಿದ ಆರೋಪಗಳು ಸಂಪೂರ್ಣ ಸುಳ್ಳು ಮತ್ತು ಸತ್ಯಕ್ಕೆ ದೂರವಿರುವುದಾಗಿ ಸ್ಪಷ್ಟಪಡಿಸಿದ್ದಾರೆ. ಯರಮರಸ್ ವ್ಯಾಪ್ತಿಯ ಸರ್ವೆ ನಂ. 114/1ರ 5 ಎಕರೆ ಜಮೀನಿಗೆ ಪ್ರವೀಣ ಕುಮಾರ್ ಅಥವಾ ಅವರ ಕುಟುಂಬಕ್ಕೆ ಯಾವುದೇ ಸಂಬಂಧವಿಲ್ಲ. ಸರ್ಕಾರಿ ಭೂಮಿಯಾಗಿದ್ದರೆ ಮಾತ್ರ ಕ್ರಮ ಕೈಗೊಳ್ಳಬಹುದು, ಆದರೆ ಪಟ್ಟಾ ಭೂಮಿಗೆ ಅವರಿಗೆ ಯಾವುದೇ ಹಕ್ಕು ಇಲ್ಲ.

ಅಂಬಾಜಿ ರಾವ್ ಭೂ ವಂಚಕರಿಂದ ಭಯಪಡುವುದಿಲ್ಲವೆಂದು ಹೇಳಿ, ಸಾರ್ವಜನಿಕರ ಹಿತಕ್ಕಾಗಿ ಹೋರಾಟವನ್ನು ಮತ್ತಷ್ಟು ಬಲವಾಗಿ ಮುಂದುವರಿಸುವುದಾಗಿ ಘೋಷಿಸಿದರು. ಪತ್ರಿಕಾಗೋಷ್ಠಿಯಲ್ಲಿ ಮಸೂದ್ ಅಲಿ, ಚಂದ್ರು ಸಗಮಕುಂಟಾ ಮತ್ತು ಕಿಶನ್ ಕುಮಾರ ಉಪಸ್ಥಿತರಿದ್ದರು.

ನಕಲಿ ದಾಖಲೆ ಸೃಷ್ಟಿಸಿ ಭೂಮಿ ವರ್ಗಾವಣೆ:ಕ್ರಮಕ್ಕೆ ಆಗ್ರಹ

ಜಯರಾಜು ನಾಗಲಾಪುರ, ರಾಜು ಈರೇಶ್, ಮಂಜು, ಶಿವು, ಗೌತಮ್, ಜಾಲನಿ ನಿಲೇಶ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಇತಿಹಾಸ ಪುಟ ಸೇರಿದ ಸರಕಾರಿ ಪ್ರೌಢಶಾಲೆಯ ವಜ್ರ ಮಹೋತ್ಸವ

ಶಾಲೆಯ ಅಭಿವೃದ್ಧಿಗಾಗಿ ಹಳೆ ವಿದ್ಯಾರ್ಥಿಗಳ ಸಂಘದಿಂದ ವಿಶೇಷ ಕೊಡುಗೆಯನ್ನು ಘೋಷಿಸಲಾಯಿತು. ನಿವೃತ್ತ ಶಿಕ್ಷಕ ಡಾ.ಹೆಚ್. ಕೊಟ್ರೇಶ ಮಾತನಾಡಿ ನೀವು ನಮ್ಮನೂ ಪ್ರತಿ ಸಾಲ ಕರೆದಾಗಲೂ ನಾವು ನಿವೃತ್ತಿಯಾಗಿವೆಂಬುದು ಮರೆತು ಹೋಗುತ್ತೆವೆ. ಈ ವಿದ್ಯಾರ್ಥಿಗಳ ಸಾಗರ ನೋಡಿದ್ದಾಗ ಮಹಾಕುಂಬಮೇಳ ನೆನಪ್ಪಿಗೆ ಬರುತ್ತದೆ. ದೇಹದಲ್ಲಿ ಉಸಿರು ಇರುವ ವರೆಗೂ ನಾವು ಈ ಊರನ್ನು ಮರೆಯುವುದಿಲ್ಲ ಎಂದರು. ಬಾಲಚಂದ್ರ ಶಿಕ್ಷಕರು ಮಾತನಾಡಿ ಈ ಊರಲ್ಲಿ ಲಕ್ಷ್ಮೀಯ ಜೊತೆ ಸರಸ್ವತಿ ಇದ್ದಾಳೆ. ಆದರಿಂದ ಯಾರು ಸಹ ಈ ಊರು ಬಿಟ್ಟು ಹೋಗುವುದಿಲ. ಅನ್ನ ನೀಡಿದ ಊರನ್ನ ನಾವು ಮರೆಯುವುದಿಲ. ಶಿಷ್ಯರು ಎಲ್ಲಾರೂ ಒಂದಿಲ ಒಂದು ಹುದ್ದಿಯಲ್ಲಿರುವುದು ಸಂತೋಷದ ವಿಷಯವಾಗಿದೆ ಎಂದರು.

ಈ ಸಂದರ್ಭದಲ್ಲಿ ಶಿಕ್ಷಕರು ವೇದಿಕೆಯ ಮೇಲೆ ತಮ್ಮ ಮನದಾಳದ ಮಾತುಗಳನ್ನು ಹಂಚಿಕೊಂಡರು. ಸಾಂಸ್ಕೃತಿಕ ವೈಭವ: ಶಾಲಾ ವಿದ್ಯಾರ್ಥಿಗಳಿಂದ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ನಾಡು-ನುಡಿ, ಸಂಸ್ಕೃತಿ ಸಾರುವ ನೃತ್ಯ ರೂಪಕಗಳು ಹಾಗೂ ಶಾಲೆಯ ಇತಿಹಾಸವನ್ನು ಸಾರುವ ಕಿರು ನಾಟಕಗಳು ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾದವು. ಸಮಾರಂಭವನ್ನು ಭೂದಾನಿಯಾದ ನೀಲಮ್ಮ ಗೋಡ್ಲಾಮಿ ಅವರ ವಂಶಸ್ಥರಿಂದ ಉದ್ಘಾಟಿಸಿದರು. ನಂತರ ಭೂಧಾನಿಯಾ ಮೊಮ್ಮಕ್ಕಳು ಮಾತನಾಡಿ ಸರಕಾರಿ ಶಾಲೆಗಳು ಜ್ಞಾನದ ದೇಗುಲಗಳು. ಸಿರವಾರದ ಈ ಶಾಲೆ 60 ವರ್ಷಗಳಿಂದ ನಿರಂತರವಾಗಿ ಜ್ಞಾನದಾಸೋಹ ಮಾಡುತ್ತಾ ಬಂದಿರುವುದು ಹೆಮ್ಮೆಯ ಸಂಗತಿ. ಇಲ್ಲಿ ಕಲಿತ ವಿದ್ಯಾರ್ಥಿಗಳು ಸಮಾಜದ ಆಸ್ತಿಯಾಗಿದ್ದಾರೆ. ಎಂದು ಶ್ಲಾಘಿಸಿದರು.

ವೇದಿಕೆಯ ಮೇಲೆ ಸುಮಾರು 80 ಕೂ ಹೆಚ್ಚು ಶಿಕ್ಷಕರು ಇದರು ಪ್ರತಿಯೊಂದು ಬ್ಯಾಚ್ ವಿದ್ಯಾರ್ಥಿಗಳು ತಮ್ಮ ನೆಚ್ಚಿನ ಶಿಕ್ಷಕರ ಜೊತೆ ಪೊಟೊ ತೆಗೆಸಿಕೊಳುತ್ತಿದ್ದರು. ನೀರು, ಊಟದ ವ್ಯವಸ್ಥೆ ಅಚ್ಚುಕಟ್ಟಾಗಿತು.

ಅಜೀತ್ ಕುಮಾರ ಹೊನ್ನಟಗಿಯಿಂದ ಬಿಜೆಪಿ ನೂತನ ಜಿಲ್ಲಾ ಪದಾಧಿಕಾರಿಗಳಿಗೆ ಸನ್ಮಾನ

ಅಮರೇಶ ಹಿರೇಬಾದಾರದಿನ್ನಿ, ಮುತ್ತಣ್ಣ ಚಾಗಬಾವಿ, ವಿನಯಕುಮಾರ, ರಾಚಪ್ಪ ನಾಯಕ ಅತ್ತನೂರು, ಹುಸೇನ್ ಭಾಷಾ, ನದಿಮ್ ಸಾಬ್,ಗ್ಯಾನಪ್ಪ, ಚನ್ನಪ್ಪ ಚನ್ನೂರು, ಹರಳಪ್ಪ ಕವಿತಾಳ, ಬಸವರಾಜ ಅತ್ತನೂರು,ಮಾರೆಪ್ಪ, ಡೇವಿಡ್,ಮೇಶಾಕ್ ಕೆಂಪು, ಜಯರಾಜ್ ಜಾಡಲದಿನ್ನಿ, ಅಮ ರೇಶ ಅತ್ತನೂರು, ಬಸವ ಹರವಿ, ಹುಲ್ಲೇಶ ಲಕ್ಕಂದಿನ್ನಿ, ನಿರಂಜನ್, ಶಿವರಾಜ ಮರಾಠ,ನಿರೂಪಾದಿ ಗುಡದಿನ್ನಿ, ಬಸವರಾಜ ನಾಯಕ ಚಾಗಬಾವಿ,ಪ್ರಕಾಶ್, ಅಜಯ್ ಕಲ್ ಶೆಟ್ಟಿ ಕವಿತಾಳ ಸೇರಿದಂತೆ ಬಿಜೆಪಿ ಕಾರ್ಯಕರ್ತರು ಇದ್ದರು.

ದೆಹಲಿ ಗಲಭೆ: ಸಂಚುಕೋರ ಉಮರ್ ಶಾರ್ಜೀಲ್‌ಗೆ ಜಾಮೀನು ನಿರಾಕರಿಸಿದ ಸುಪ್ರೀಂ ಕೋರ್ಟ್



ನವದೆಹಲಿ,ಜ.05-

2020ರ ದೆಹಲಿ ಗಲಭೆ ಪ್ರಕರಣದ ಸಂಚುಕೋರರಾದ ಉಮರ್ ಖಾಲಿದ್ ಮತ್ತು ಶಾರ್ಜೀ ಲ್ ಇಮಾಮ್‌ಗೆ ಜಾಮೀನು ನೀಡಲು ಸುಪ್ರೀಂ ಕೋರ್ಟ್ ಸೋಮವಾರ ನಿರಾಕರಿಸಿದೆ. ಜತೆಗೆ, ಉಳಿದ ಐದು ಆರೋಪಿಗಳಿಗೆ ಇದೇ ವೇಳೆ ಜಾಮೀನು ಮಂಜೂರು ಮಾಡಿದೆ.

ದೆಹಲಿ ಹೈಕೋರ್ಟ್ ಜಾಮೀನು ನೀಡಲು ನಿರಾಕರಿಸಿದ್ದನ್ನು ಪ್ರಶ್ನಿಸಿ ಆರೋಪಿಗಳು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಇದರ ವಿಚಾರಣೆ ನಡೆಸಿದ್ದ ನ್ಯಾಯ ಮೂರ್ತಿಗಳಾದ ಅರವಿಂದ್ ಕುಮಾರ್ ಮತ್ತು ಎನ್.ವಿ. ಅಂಜಾ ರಿಯಾ ಅವರಿದ್ದ ಪೀಠವು ಡಿಸೆಂ ಬರ್ 10ರಂದು ಆದೇಶ ಕಾಯ್ದಿರಿಸಿತ್ತು.

ಪ್ರಮುಖ ಸಂಚುಕೋರರಾದ ಖಾಲಿದ್ ಮತ್ತು ಇಮಾಮ್ ಇತರ ಆರೋಪಿಗಳಿಗಿಂತ ಭಿನ್ನವಾದ ಆರೋಪ ಹೊಂದಿದ್ದಾರೆ. ಹೀಗಾಗಿ, ಜಾಮೀನು ನೀಡಲು ಸಾಧ್ಯವಿಲ್ಲ. ಇತರ ಆರೋಪಿಗಳಾದ ಗುಲ್ಫಿಶಾ ಫಾತಿಮಾ, ಮೀರಾ ಹೈದ್ರ್, ಶಿಫಾ ಉರ್ ರೆಹಮಾನ್, ಮೊಹಮ್ಮದ್ ಸಲೀಮ್ ಖಾನ್ ಮತ್ತು ಶಾದಾಬ್ ಅಹ್ಮದ್ ಮೇಲಿನ ಆರೋಪಗಳು ಕಡಿಮೆ ಪ್ರಮಾಣದಲ್ಲಿದ್ದ ಜಾಮೀನು ನೀಡಲಾಗುವುದು ಎಂದಿತು.


ಗಲಭೆ ಸಂಚಿನ ಪ್ರಮುಖ ಆರೋಪಿಗಳಾದ ಉಮರ್ ಖಾಲಿದ್ ಮತ್ತು ಶಾರ್ಜೀಲ್ ಇಮಾಮ್ ವಿರುದ್ಧ ಪ್ರಾಸಿಕ್ಯೂಷನ್ ಸಲ್ಲಿಸಿದ ಆರೋಪಗಳು ಗಂಭೀರ ವಾಗಿವೆ. ಹೀಗಾಗಿ, ಅವರ ಜಾಮೀ ನು ಅರ್ಜಿಯನ್ನು ಪುರಸ್ಕರಿಸಲು ಸಾಧ್ಯವಿಲ್ಲ ಎಂದು ಪೀಠದ ಪರ ವಾಗಿ ತೀರ್ಪು ಪ್ರಕಟಿಸಿದ ನ್ಯಾಯ ಮೂರ್ತಿ ಅರವಿಂದ್ ಕುಮಾರ್ ಹೇಳಿದರು.

ಪ್ರತಿಯೊಬ್ಬ ಮೇಲ್ಮನವಿದಾರರ ಮೇಲೆ ಇರುವ ಆರೋಪಗಳು ಭಿನ್ನವಾಗಿವೆ. ಜಾಮೀನು ಪಡೆಯಲು ಪ್ರಮುಖ ಸಂಚುಕೋರರು ಮಂಡಿಸಿದ ವಾದಗಳು ಸ್ವೀಕಾರಾರ್ಹ ವಾಗಿಲ್ಲ. ಪ್ರಾಸಿಕ್ಯೂಷನ್ ವಾದಗಳು ಬಲವಾಗಿವೆ ಎಂದು ಪೀಠವು ಹೇಳಿದೆ.

ಪ್ರಕರಣದ ವಿವರ: ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ಮತ್ತು ಎನ್‌ಆರ್‌ಸಿ ವಿರುದ್ಧ 2020 ರಲ್ಲಿ ದೆಹಲಿಯಲ್ಲಿ ನಡೆದ ಪ್ರತಿಭಟನೆಯಲ್ಲಿ ಭಾರೀ ಹಿಂಸಾಚಾರದಿಂದಾಗಿ 53 ಜನರು ಸಾವನ್ನಪ್ಪಿ, 700ಕ್ಕೂ ಹೆಚ್ಚು ಜನರು ಗಾಯಗೊಂ ಡಿದ್ದರು. ಈ ಪ್ರಕರಣದ ಮಾಸ್ಟರ್ ಮೈಂಡ್ ಉಮರ್ ಖಲೀದ್ ಮತ್ತು ಇಮಾಮ್ ಸೇರಿದಂತೆ ಒಟ್ಟು 9 ಜನರ ವಿರುದ್ಧ ಯುಎಪಿಎ ಮತ್ತು ಐಪಿಸಿ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಿ ಬಂಧಿಸಲಾಗಿದೆ.

ಇಸ್ಲಾಮಿಕ್ ಸ್ಟೇಟ್ (ಐಎಸ್) ಸಂಚು ಪ್ರಕರಣದಲ್ಲಿ ಎರಡು ವರ್ಷದ ಹಿಂದೆ ಬಂಧಿತರಾದ ಮೂವರು ಶಂಕಿತ ಭಯೋತ್ಪಾದಕರಲ್ಲಿ ಒಬ್ಬ ನಾದ ಅರ್ಷದ್ ಎಂಬಾತ ಪಿಎಚ್‌ಡಿ ವಿದ್ಯಾರ್ಥಿಯಾಗಿದ್ದು, ಈತ ದೆಹಲಿ ಗಲಭೆ ಸಂಚಿನ ಪ್ರಕರಣದಲ್ಲಿ ಭಾಗಿಯಾಗಿರುವವಅನುಮಾನ ವ್ಯಕ್ತವಾಗಿತ್ತು.ಸಿಎಎ-ಎನ್‌ಆರ್‌ಸಿ ವಿರೋಧಿ ಪ್ರತಿಭಟನೆಯ ವೇಳೆ ದೆಹಲಿಯಲ್ಲಿ ನಡೆದ ಗಲಭೆಗಳ ಸಂಚಿನಲ್ಲಿ ಈ ಶಂಕಿತ ಉಗ್ರನ ಪ್ರಮುಖ ಪಾತ್ರವಿದ್ದು, 'ತೇರಾ ಮೇರಾ ರಿಶ್ತಾ ಕ್ಯಾ ಹೈ..' ಎಂಬ ಘೋಷಣೆಯನ್ನು ಅರ್ಷದ್ ನೀಡಿದ್ದ ಎಂಬುದಾಗಿ ಮೂಲಗಳು ತಿಳಿಸಿವೆ. ಶಾಹೀನ್ ಬಾಗ್‌ನಲ್ಲಿ ಪ್ರತಿಭಟನೆ ನಡೆಸುವಲ್ಲೂ ಪ್ರಮುಖ ಪಾತ್ರ ವಹಿಸಿದ್ದಾನೆ ಎಂದು ವರದಿಯಾಗಿತ್ತು.

ದುಬಲಗುಂಡಿ ಗ್ರಾಮ ಪಂಚಾಯತ್ ಅಧ್ಯಕ್ಷರ ಸದಸ್ಯತ್ವ ರದ್ದು ಪಡಿಸುವಂತೆ ಜಿ.ಪಂ.ಸಿಇಒಗೆ ಮನವಿ



ಹುಮನಾಬಾದ್ ,ಜ.05-

ತಾಲ್ಲೂಕಿನ ದುಬಲಗುಂಡಿ ಗ್ರಾಮ ಪಂಚಾಯತ್ ಅಧ್ಯಕ್ಷ ನಾಗರಾಜ ಭೋಜಗುಂಡಿ ಅವರು 11 ತಿಂಗಳಿಂದ ಇಲ್ಲಿವರೆಗೂ ಯಾವುದೇ ಸಾಮಾನ್ಯ ಸಭೆ ನಡೆಸದೆ ಬೇಜವಾಬ್ದಾರಿ ತೋರಿದ್ದಾರೆ ಎಂದು ಆರೋಪಿಸಿ, ಅವರ ಸದಸ್ಯತ್ವ ರದ್ದುಪಡಿಸಬೇಕು ಎಂದು ದುಬಲಗುಂಡಿ ಗ್ರಾಮ ಪಂಚಾಯತ್ ಸದಸ್ಯ ವಿಜಯಕುಮಾರ್ ನಾತೆ ಅವರು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಗಿರೀಶ್ ಬದೋಲೆಗೆ ಅವರಿಗೆ ಮನವಿಯನ್ನು ಸಲ್ಲಿಸಿದ್ದಾರೆ.

ಗ್ರಾಮ ಸ್ವರಾಜ ಮತ್ತು ಪಂಚಾಯತ್ ರಾಜ್ ಕಾಯ್ದೆ 1993ರ ಪ್ರಕರಣ 43(ಎ) (1) (ಜಿಜಿ) ರ ಮತ್ತು 48(4) ಅಡಿಯಲ್ಲಿ ಬೀದರ್ ಜಿಲ್ಲೆಯ ಹುಮನಾಬಾದ್ ತಾಲೂಕಿನ ದುಬಲಗುಂಡಿ ಗ್ರಾಮ ಪಂಚಾಯತ ಅಧ್ಯಕ್ಷ ನಾಗರಾಜ್ ಭೋಜಗೊಂಡ ಅವರನ್ನು ಸದಸ್ಯತ್ವದಿಂದ ಅನರ್ಹಗೊಳಿಸಲು ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿ ರಘುನಾಥ್ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ದುಬಲಗುಂಡಿ ಗ್ರಾಮ ಪಂಚಾಯತ್ ಅಧ್ಯಕ್ಷನಾದ ನಂತರ 3 ಬಾರಿ ಮಾತ್ರ ಸಾಮಾನ್ಯ ಸಭೆ ಕರೆದಿದ್ದಾರೆ. 2025ರ ಜ.1ರಂದು ಇವರ ಅಧ್ಯಕ್ಷತೆಯಲ್ಲಿ ಕೊನೆ ತುರ್ತು ಸಭೆ ನಡೆದಿರುತ್ತದೆ. ಅಧ್ಯಕ್ಷ ಹುದ್ದೆಯ ಪದಾವಧಿಯು ಪ್ರಾರಂಭದ ನಂತರ ನಡೆದ ಅನುಮೋದನೆಯ ಸಾಮಾನ್ಯ ಸಭೆ, ವಿಶೇಷ ಸಭೆ ಹಾಗೂ ತುರ್ತು ಸಭೆ ಸರಿಯಾಗಿ ಸಮಯಕ್ಕೆ ನಡೆಸಿಲ್ಲ ಎಂದು ಅವರು ಆರೋಪಿಸಿದ್ದಾರೆ.

15ನೇ ಹಣಕಾಸು ಯೋಜನೆಯಲ್ಲಿ ಕೆಲಸ ಮಾಡದೆ ನಿಯಮಗಳು ಗಾಳಿಗೆ ತೂರಿ ಮನ ಬಂದಂತೆ ಸರಕಾರದ ಹಣವನ್ನು ದುರುಪಯೋಗ ಪಡಿಸಿಕೊಳ್ಳಲಾಗಿದೆ. ಅದೇ ರೀತಿ ಯಾವುದೇ ಅಭಿವೃದ್ಧಿ ಕೆಲಸಗಳು ಮಾಡದೇ ಸರಕಾರದ ಹಣವನ್ನು ನಕಲಿ ಬಿಲ್ಲುಗಳನ್ನು ಸೃಷ್ಟಿಸಿ ಸರಕಾರಕ್ಕೆ ಮೋಸ ಮಾಡಿರುತ್ತಾರೆ. ಅಧ್ಯಕ್ಷರ ಜೊತೆಯಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಕೂಡಾ ಶಾಮಿಲಾಗಿ ಅಕ್ರಮ ಮತ್ತು ಅವ್ಯವಾಹಾರದಲ್ಲಿ ತೊಡಗಿದ್ದಾರೆ. ಹಾಗಾಗಿ ಇವರಿಬ್ಬರ ವಿರುದ್ಧ ಸೂಕ್ತ ತನಿಖೆ ನಡೆಸಿ ಕ್ರಮ ಕೈಗೊಳ್ಳಬೇಕು ಎಂದು ಗಿರೀಶ್ ಬದೋಲೆ ಪತ್ರದಲ್ಲಿ ಒತ್ತಾಯಿಸಿದ್ದಾರೆ.



ಸರಕಾರಿ ಜಾಗ ಒತ್ತುವರಿ ದೂರು: ಸ್ಥಳಕ್ಕೆ ತಹಶೀಲ್ದಾರ್ ಭೇಟಿ

ಮರಿಯಮ್ಮನಹಳ್ಳಿ :

ಪಟ್ಟಣದಲ್ಲಿ ಸರಕಾರಿ ಜಾಗ ಒತ್ತುವರಿಯಾಗಿದೆ. ಮೂಲ ವಾರಸುದಾರರಲ್ಲದವರಿಗೆ ಪಟ್ಟಣ ಪಂಚಾಯಿತಿಯಿಂದ ಫಾರಂ ನಂಬರ್ 3 ಕೊಡಲಾಗುತ್ತಿದೆ ಎಂಬ ಸಾರ್ವಜನಿಕರ ದೂರಿನ ಮೇರೆಗೆ ಹೊಸಪೇಟೆ ತಹಶೀಲ್ದಾರ ಶೃತಿ ಮಳ್ಳಪ್ಪ ಗೌಡರ ಶುಕ್ರವಾರ ಮರಿಯಮ್ಮನಹಳ್ಳಿಗೆ ಭೇಟಿ ನೀಡಿ ಸ್ಥಳ ಪರಿಶೀಲಿಸಿದರು.

ರಾಷ್ಟ್ರೀಯ ಹೆದ್ದಾರಿ ಬಳಿಯಿರುವ ಶನೇಶ್ವರ ದೇವಸ್ಥಾನದ ಪಕ್ಕದಲ್ಲಿ ಹೊಲಗಳಿಗೆ ತೆರಳಲೆಂದು ಸಾರ್ವಜನಿಕ ರಸ್ತೆಯಿದ್ದು ಅದನ್ನು ಒತ್ತುವರಿ ಮಾಡಲಾಗಿದೆ. ಅಲ್ಲದೇ ಮೂಲ ವಾರಸುದಾರರಲ್ಲದವರಿಗೆ ಪಟ್ಟಣ ಪಂಚಾಯತ್ ನಿಂದ ಫಾರಂ ನಂರ್ಬ 3 ನೀಡಲಾಗಿದೆ ಎಂದು ಸ್ಥಳಕ್ಕೆ ಭೇಟಿ ನೀಡಿದ ತಹಶಿಲ್ದಾರರಿಗೆ ದೂರಿದರು.

ಈ ಬಗ್ಗೆ ಮಾಹಿತಿ ಪಡೆದ ತಹಶೀಲ್ದಾರ್ ಶೃತಿ ಮಳ್ಳಪ್ಪಗೌಡ ಅವರು ಎಲ್ಲಾ ದಾಖಲೆಗಳನ್ನು ತರಿಸಿಕೊಂಡು ಪರಿಶೀಲಿಸಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ 2 ನೇ ವಾರ್ಡ್ ಪ.ಪಂ.ಸದಸ್ಯ ಎಲ್ ಪರಶುರಾಮ, ಕುಪ್ಪ ರಾಘವೇಂದ್ರ, ಗೌಳಿ ವಿರುಪಾಕ್ಷಿ, ಗೌಳಿ ಭರತ ಇತರರು ಇದ್ದರು.



ಗವಿಮಠ ಜಾತ್ರಾಮಹೋತ್ಸವಕ್ಕೆ ಬೃಹತ್ ಪ್ರಮಾಣದಲ್ಲಿ ಮೈಸೂರು ಪಾಕ್ ತಯಾರಿ

ಕೊಪ್ಪಳ,ಜ.05-

ಗವಿಮಠ ಜಾತ್ರಾಮಹೋತ್ಸವದ ಅಂಗವಾಗಿ ಆಗಮಿಸುವ ಭಕ್ತಾದಿಗಳಿಗಾಗಿ ಬೃಹತ್ ಪ್ರಮಾಣದಲ್ಲಿ ಮೈಸೂರು ಪಾಕ್ ತಯಾರಿಸಲಾಗುತ್ತಿದೆ. ಪ್ರಸಾದ ತಯಾರಿಕೆಗೆ 60 ಕ್ವಿಂಟಲ್ ಸಕ್ಕರೆ, 5,000 ಲೀಟರ್ ಅಡುಗೆ ಎಣ್ಣೆ, 30 ಕ್ವಿಂಟಲ್ ಕಡಲೆ ಹಿಟ್ಟು, 5 ಕ್ವಿಂಟಲ್ ಮೈದ ಹಿಟ್ಟು, 30 ಕ್ವಿಂಟಲ್ ತುಪ್ಪ ಹಾಗೂ 50 ಕೆಜಿ ಏಲಕ್ಕಿ ಬಳಸಲಾಗುತ್ತಿದೆ.

ಈ ಪ್ರಮಾಣದಲ್ಲಿ ತಯಾರಿಸಲಾಗುತ್ತಿರುವ ಮೈಸೂರು ಪಾಕ್ ಅನ್ನು ಅಂದಾಜು 10ರಿಂದ 12 ಲಕ್ಷ ಭಕ್ತರು ಸೇವಿಸಬಹುದಾಗಿದೆ.

ಮೈಸೂರು ಪಾಕ್ ತಯಾರಿಕೆಗೆ ಅಥಣಿ, ಧನಾವರ, ಮಸ್ಕಿ, ಗಬ್ಬೂರ್, ಬಳಗಾನೂರು, ತಾವರಗೇರಾ ಸೇರಿದಂತೆ ವಿವಿಧ ಭಾಗಗಳಿಂದ 100ಕ್ಕೂ ಹೆಚ್ಚು ಬಾಣಸಿಗರು ಸ್ವಯಂಪ್ರೇರಿತರಾಗಿ ಆಗಮಿಸಿ ತಯಾರಿಕಾ ಕಾರ್ಯದಲ್ಲಿ ತೊಡಗಿದ್ದಾರೆ. ಇವರಿಗೆ ಸಹಾಯಕರಾಗಿ ಹಾಗೂ ಇತರೆ ವ್ಯವಸ್ಥೆಗಳ ನಿರ್ವಹಣೆಗೆ 200ಕ್ಕೂ ಹೆಚ್ಚು ಜನರು ಸೇವೆಯಲ್ಲಿ ನಿರತರಾಗಿದ್ದಾರೆ.

ಕರ್ನಾಟಕ ಬಹುಜನ ಜಾಗೃತಿ ವೇದಿಕೆ ಜಿಲ್ಲಾಧ್ಯಕ್ಷರಾಗಿ ಚಂದ್ರಶಾ ಎನ್. ಗಾಯಕವಾಡ ನೇಮಕ



ಕಲಬುರಗಿ,ಜ.05-

ಕರ್ನಾಟಕ ಬಹುಜನ ಜಾಗೃತಿ ವೇದಿಕೆಯಿಂದ ನಡೆದ ಕಾರ್ಯಕರ್ತರ ಮಹತ್ವದ ಸಭೆಯಲ್ಲಿ ಸಂಘಟನೆಯ ನೂತನ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆ ಪೂರ್ಣಗೊಂಡಿದ್ದು, ಚಂದ್ರಶಾ ಎನ್.ಗಾಯಕವಾಡ ಅವರನ್ನು ಜಿಲ್ಲೆಯ ಅಧ್ಯಕ್ಷರಾಗಿ ಅಧಿಕೃತವಾಗಿ ನೇಮಕ ಮಾಡಲಾಯಿತು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ವೇದಿಕೆಯ ರಾಜ್ಯಾಧ್ಯಕ್ಷ ದತ್ತಾತ್ರೆಯ ಎಸ್. ಕಟ್ಟಿಮನಿ ಅವರು, ಬಹುಜನರ ಹಕ್ಕುಗಳ ರಕ್ಷಣೆ, ಸಾಮಾಜಿಕ ನ್ಯಾಯ, ಸಮಾನತೆ ಹಾಗೂ ಸಂವಿಧಾನಾತ್ಮಕ ಮೌಲ್ಯಗಳ ಅನುಷ್ಠಾನಕ್ಕಾಗಿ ವೇದಿಕೆ ನಿರಂತರ ಹೋರಾಟ ನಡೆಸುತ್ತಿದೆ ಎಂದು ತಿಳಿಸಿದರು.

ಸಂಘಟನೆ ನೆಲಮಟ್ಟದಲ್ಲಿ ಬಲಿಷ್ಠವಾಗಬೇಕಾದ ಅಗತ್ಯವಿದ್ದು, ಅದಕ್ಕಾಗಿ ಸಮರ್ಪಿತ ಹಾಗೂ ಹೋರಾಟದ ಮನೋಭಾವ ಹೊಂದಿರುವ ನಾಯಕತ್ವ ಅವಶ್ಯಕ ಎಂದು ಹೇಳಿದರು.

ಸಭೆಯಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ಜೀವನ್ ಕುಮಾರ್ ಎನ್. ವಾಘ್ಮಾರೆ ಸೇರಿದಂತೆ ಇತರ ಪದಾಧಿಕಾರಿಗಳನ್ನು ನೇಮಕ ಮಾಡಲಾಯಿತು.

ಈ ಸಂದರ್ಭದಲ್ಲಿ ಮುಖಂಡ ಚನ್ನವೀರ ಕಾಳಕಿಂಗೆ, ದಶವಂತ ಬಿ.ಕಣಮುಸಕರ್, ಟೈಗರ್ ವಿಗ್ನಶ್ವರ್, ಗೌತಮ ಕಾಂಬಳೆ, ರೈತ ಸಂಘದ ಜಿಲ್ಲಾಧ್ಯಕ್ಷ ನಾಗೇಂದ್ರ ಥಂಬೆ,

ಭೀಮ ಆರ್ಮಿ ಜಿಲ್ಲಾಧ್ಯಕ್ಷ ಉದಯಕುಮಾರ ಬಿ. ಬಣಗೆ, ರಾಜ್ಯ ಯುವ ಅಧ್ಯಕ್ಷ ಸಂತೋಷ ಪಾಳಾ, ಡಿಸಿಸಿ ನಿರ್ದೇಶಕ ಪಂಡಿತ ನಡಗೇರಿ,

ಮಲ್ಲು ಅಟ್ಟೂರ, ಆಕಾಶ ಸಿಂಧೆ, ಗೌರಿಶಂಕರ್ ಕೆ.ಕೆ.ನಗರ ಮತ್ತು ಸಿದ್ದಾರ್ಥ ವಿ. ದಾಂಬ್ರೆ, ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಹೆಸರು, ಉದ್ದು, ಸೂರ್ಯಕಾಂತಿ ಕಾಳು, ಸೋಯಾಬಿನ್ ಮಾರಾಟ ಮಾಡಲು ಕಾಲಾವಧಿ ವಿಸ್ತರಣೆ: ಬಿ.ಫೌಝಿಯಾ ತರನ್ನುಮ್

ಕಲಬುರಗಿ,ಜ.05-

ಪ್ರಸಕ್ತ 2025-26ನೇ ಸಾಲಿನ ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ ಮುಂಗಾರು ಹಂಗಾಮಿನ ಎಫ್.ಎ.ಕ್ಯೂ. ಗುಣಮಟ್ಟದ ಹೆಸರು ಕಾಳು, ಉದ್ದಿನ ಕಾಳು, ಸೂರ್ಯಕಾಂತಿ ಹಾಗೂ ಸೋಯಾಬಿನ್ ಮಾರಾಟ ಮಾಡಲು ಈಗಾಗಲೇ ನಿಗದಿತ ಅವಧಿಯಲ್ಲಿ ನೊಂದಾಯಿಸಿಕೊಂಡಿರುವ ರೈತರು ಮಾರಾಟ ಮಾಡುವ ಕಾಲಾವಧಿ ವಿಸ್ತರಿಸಲಾಗಿದ್ದು, ಜಿಲ್ಲೆಯ ರೈತರು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಜಿಲ್ಲಾಧಿಕಾರಿ ಬಿ.ಫೌಝಿಯಾ ತರನ್ನುಮ್ ಅವರು ತಿಳಿಸಿದ್ದಾರೆ.

ಹೆಸರು ಕಾಳು ಪ್ರತಿ ಕ್ವಿಂಟಾಲ್ಗೆ 8,768 ರೂ., ಉದ್ದಿನ ಕಾಳು ಪ್ರತಿ ಕ್ವಿಂಟಾಲ್ಗೆ 7,800 ರೂ. ಮತ್ತು ಸೂರ್ಯಕಾಂತಿ ಪ್ರತಿ ಕ್ವಿಂಟಾಲ್ಗೆ 7,721 ರೂ. ಗಳಂತೆ ಖರೀದಿಸಲಾಗುತ್ತಿದ್ದು, ಈ ಉತ್ಪನ್ನಗಳ ಮಾರಾಟ ಮಾಡಲು ಜ.22 ರವರೆಗೆ ಹಾಗೂ ಸೋಯಾಬೀನ್ ಪ್ರತಿ ಕ್ವಿಂಟಾಲ್ಗೆ 5,328 ರೂ. ಗಳಂತೆ ಮಾರಾಟ ಮಾಡಲು ಜ.26 ರವರೆಗೆ ಕಾಲಾವಧಿ ವಿಸ್ತರಿಸಲಾಗಿದೆ.

ಜಿಲ್ಲೆಯ ರೈತರು ಸಮೀಪದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ (ಪಿ.ಎ.ಸಿ.ಎಸ್) (ಕಅಇಖ) ಹಾಗೂ (ಎಫ್.ಪಿ.ಓ.) ಊಕಣ ಗಳಿಗೆ ಭೇಟಿ ನೀಡಿ ತಾವು ಬೆಳೆದ ಹೆಸರು ಕಾಳು, ಉದ್ದಿನ ಕಾಳು, ಸೂರ್ಯಕಾಂತಿ ಹಾಗೂ ಸೋಯಾಬೀನ್ ನಿಗದಿತ ಅವಧಿಯಲ್ಲಿ ಮಾರಾಟ ಮಾಡಬೇಕು.

ಹೆಚ್ಚಿನ ಮಾಹಿತಿಗಾಗಿ ಉದ್ದಿನ ಕಾಳು ಮತ್ತು ಸೋಯಾಬೀನ್ ಮಾರಾಟಕ್ಕೆ ಕೆ.ಎಸ್.ಸಿ.ಎಮ್.ಎಫ್. ಮೊಬೈಲ್ ಸಂಖ್ಯೆ 9449864446, ಹೆಸರು ಕಾಳು ಮಾರಾಟಕ್ಕೆ ಕೆ.ಎಸ್.ಪಿ.ಎ.ಎಮ್. ಎಲ್. ಮೊಬೈಲ್ ಸಂಖ್ಯೆ 9964474444 ಹಾಗೂ ಸೂರ್ಯಕಾಂತಿ ಮಾರಾಟಕ್ಕೆ ಕೆ.ಓ.ಎಫ್. ಮೊಬೈಲ್ ಸಂಖ್ಯೆ. 9591812142 ಸಂಪರ್ಕಿಸಲು ಕೋರಿದೆ.




ಬಳ್ಳಾರಿ ಗುಂಪು ಘರ್ಷಣೆ: ನ್ಯಾಯಾಂಗ ತನಿಖೆಗೆ ಆರ್.ಅಶೋಕ್ ಒತ್ತಾಯ

ಬಳ್ಳಾರಿ,ಜ.05- ಬಳ್ಳಾರಿಯಲ್ಲಿ ಗಲಾಟೆ ಮತ್ತು ಗುಂಡೇಟಿನಿಂದ ವ್ಯಕ್ತಿಯೊಬ್ಬರು ಮೃತಪಟ್ಟಿರುವ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸಬೇಕು ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಒತ್ತಾಯಿಸಿದರು.

ಗುಂಪು ಘರ್ಷಣೆ ನಡೆದ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಬಳಿಕ ಸುದ್ದಿಗೋಷ್ಟಿಯಲ್ಲಿ ಮಾತನಾಡಿದ ಆರ್.ಅಶೋಕ್, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಎಂದು ರಾಜ್ಯ ಸರಕಾರದ ವಿರುದ್ಧ ವಾಗ್ದಾಳಿ ನಡೆಸಿದರು. ಬ್ಯಾನರ್‌ಗಲಭೆ ಮತ್ತು ಗುಂಡಿನ ಚಕಮಕಿಯು ಮಾಜಿ ಸಚಿವ ಹಾಗೂ ಹಾಲಿ ಬಿಜೆಪಿ ಶಾಸಕ ಜನಾರ್ದನ ರೆಡ್ಡಿ ಅವರನ್ನು ಮುಗಿಸಲು ನಡೆಸಿದ ಪೂರ್ವಯೋಜಿತ ಸಂಚು. ಈ ಘಟನೆಯ ಬಗ್ಗೆ ಸಮಗ್ರವಾದ ನ್ಯಾಯಾಂಗ ತನಿಖೆ ನಡೆಸಬೇಕು ಎಂದು ಅವರು ಸರಕಾರವನ್ನು ಒತ್ತಾಯಿಸಿದರು. ಬಳ್ಳಾರಿ ಎಸ್ಪಿ ಅವರ ಅಮಾನತನ್ನು ಖಂಡಿಸಿರುವ ಆರ್.ಅಶೋಕ್, ಸರಕಾರ ಅಧಿಕಾರಿಗಳನ್ನು ಬಲಿಪಶು ಮಾಡುತ್ತಿದೆ ಮತ್ತು ಪೊಲೀಸ್ ಠಾಣೆಗಳು ಕಾಂಗ್ರೆಸ್ ಕಚೇರಿಗಳಂತೆ ವರ್ತಿಸುತ್ತಿವೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ವೇಳೆ ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಮಾತನಾಡಿ, ರಾಜ್ಯದಲ್ಲಿ ಹೊಸ ವರ್ಷ ರಕ್ತಸಿಕ್ತ ಅಧ್ಯಾಯದೊಂದಿಗೆ ಆರಂಭವಾಗಿದೆ. ಅದಕ್ಕೆ ಕಾರಣರಾದವರ ಪರವಾಗಿ ಸರಕಾರ ನಿಂತಿದೆ. ಶಾಸಕ ಭರತ್ ರೆಡ್ಡಿ ಮತ್ತು ಬೆಂಬಲಿಗರನ್ನು ಬಂಧಿಸುವ ಬದಲಿಗೆ, ಜನಾರ್ದನ ರೆಡ್ಡಿ ವಿರುದ್ಧ ಪ್ರಕರಣ ದಾಖಲಿಸಿದ್ದು ಏಕೆ? ಎಂದು ಪ್ರಶ್ನಿಸಿದರು. ಈ ಸಂದರ್ಭದಲ್ಲಿ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ಕರ್ನಾಟಕ ಬಹುಜನ ಜಾಗೃತಿ ವೇದಿಕೆ ಜಿಲ್ಲಾಧ್ಯಕ್ಷರಾಗಿ ಚಂದ್ರಶಾ ಎನ್. ಗಾಯಕವಾಡ ನೇಮಕ



ಕಲಬುರಗಿ,ಜ.05-

ಕರ್ನಾಟಕ ಬಹುಜನ ಜಾಗೃತಿ ವೇದಿಕೆಯಿಂದ ನಡೆದ ಕಾರ್ಯಕರ್ತರ ಮಹತ್ವದ ಸಭೆಯಲ್ಲಿ ಸಂಘಟನೆಯ ನೂತನ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆ ಪೂರ್ಣಗೊಂಡಿದ್ದು, ಚಂದ್ರಶಾ ಎನ್.ಗಾಯಕವಾಡ ಅವರನ್ನು ಜಿಲ್ಲೆಯ ಅಧ್ಯಕ್ಷರಾಗಿ ಅಧಿಕೃತವಾಗಿ ನೇಮಕ ಮಾಡಲಾಯಿತು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ವೇದಿಕೆಯ ರಾಜ್ಯಾಧ್ಯಕ್ಷ ದತ್ತಾತ್ರೆಯ ಎಸ್. ಕಟ್ಟಿಮನಿ ಅವರು, ಬಹುಜನರ ಹಕ್ಕುಗಳ ರಕ್ಷಣೆ, ಸಾಮಾಜಿಕ ನ್ಯಾಯ, ಸಮಾನತೆ ಹಾಗೂ ಸಂವಿಧಾನಾತ್ಮಕ ಮೌಲ್ಯಗಳ ಅನುಷ್ಠಾನಕ್ಕಾಗಿ ವೇದಿಕೆ ನಿರಂತರ ಹೋರಾಟ ನಡೆಸುತ್ತಿದೆ ಎಂದು ತಿಳಿಸಿದರು.

ಸಂಘಟನೆ ನೆಲಮಟ್ಟದಲ್ಲಿ ಬಲಿಷ್ಠವಾಗಬೇಕಾದ ಅಗತ್ಯವಿದ್ದು, ಅದಕ್ಕಾಗಿ ಸಮರ್ಪಿತ ಹಾಗೂ ಹೋರಾಟದ ಮನೋಭಾವ ಹೊಂದಿರುವ ನಾಯಕತ್ವ ಅವಶ್ಯಕ ಎಂದು ಹೇಳಿದರು.

ಸಭೆಯಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ಜೀವನ್ ಕುಮಾರ್ ಎನ್. ವಾಘ್ಮಾರೆ ಸೇರಿದಂತೆ ಇತರ ಪದಾಧಿಕಾರಿಗಳನ್ನು ನೇಮಕ ಮಾಡಲಾಯಿತು.

ಈ ಸಂದರ್ಭದಲ್ಲಿ ಮುಖಂಡ ಚನ್ನವೀರ ಕಾಳಕಿಂಗೆ, ದಶವಂತ ಬಿ.ಕಣಮುಸಕರ್, ಟೈಗರ್ ವಿಗ್ನಶ್ವರ್, ಗೌತಮ ಕಾಂಬಳೆ, ರೈತ ಸಂಘದ ಜಿಲ್ಲಾಧ್ಯಕ್ಷ ನಾಗೇಂದ್ರ ಥಂಬೆ,

ಭೀಮ ಆರ್ಮಿ ಜಿಲ್ಲಾಧ್ಯಕ್ಷ ಉದಯಕುಮಾರ ಬಿ. ಬಣಗೆ, ರಾಜ್ಯ ಯುವ ಅಧ್ಯಕ್ಷ ಸಂತೋಷ ಪಾಳಾ, ಡಿಸಿಸಿ ನಿರ್ದೇಶಕ ಪಂಡಿತ ನಡಗೇರಿ,

ಮಲ್ಲು ಅಟ್ಟೂರ, ಆಕಾಶ ಸಿಂಧೆ, ಗೌರಿಶಂಕರ್ ಕೆ.ಕೆ.ನಗರ ಮತ್ತು ಸಿದ್ದಾರ್ಥ ವಿ. ದಾಂಬ್ರೆ, ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

ನಿಮ್ಮೂರು ಸುದ್ದಿ

ಸಂಪಾದಕೀಯ

ವೆನೆಜುವೆಲಾ ದಾಳಿ ಜಗತ್ತಿನೆದುರು ಬೆತ್ತಲಾದ ಅಮೆರಿಕ ದುಷ್ಟತನ ಮತ್ತು ಟ್ರಂಪ್ ಕಿಡಿಗೇಡಿತನ

ಬಲಿಷ್ಠ ಅಮೆರಿಕದ ಸಾಮ್ರಾಜ್ಯಶಾಹಿ ದಾಹ, ಆರ್ಥಿಕ ಹಿತಾಸಕ್ತಿಯನ್ನು ಉಗ್ರವಾಗಿ ಖಂಡಿಸಿ, ವೆನೆಜುವೆಲಾ ಜನತೆಯ ಸಾರ್ವಭೌಮತೆಯ ಜೊತೆಗೆ ನಿಲ್ಲದಿದ್ದರೆ- ಇವತ್ತು ವೆನೆಜುವೆಲಾಗೆ ಆಗಿದ್ದು, ನಾಳೆ ನಮಗೂ ಆಗಬಹುದು.

ಮಾದಕವಸ್ತು ಕಳ್ಳಸಾಗಾಣಿಕೆ ಮತ್ತು ಭಯೋತ್ಪಾದನೆ ಆರೋಪಕ್ಕೆ ಸಂಬಂಧಿಸಿದಂತೆ, ವೆನೆಜುವೆಲಾ ಅಧ್ಯಕ್ಷ ನಿಕೊಲಸ್ ಮಡುರೊ ಮತ್ತು ಅವರ ಪತ್ನಿಯನ್ನು ಅಮೆರಿಕ ಬಂಧಿಸಿದೆ. ನ್ಯೂಯಾರ್ಕ್‌ನ ಬ್ರೂಕ್ಲಿನ್ ಜೈಲಿನಲ್ಲಿಟ್ಟಿದೆ. ಇಂದು ಮ್ಯಾನ್‌ಹಟನ್‌ನ ಫೆಡರಲ್ ನ್ಯಾಯಾಲಯಕ್ಕೆ ಹಾಜರುಪಡಿಸುವ ಸಾಧ್ಯತೆ ಇದೆ.

ಇದೇ ಸಂದರ್ಭದಲ್ಲಿ ಅತ್ತ ಪುಟ್ಟ, ಸ್ವತಂತ್ರ ರಾಷ್ಟ್ರ ವೆನೆಜುವೆಲಾದಲ್ಲಿ ಅಧಿಕಾರ ವರ್ಗಾವಣೆ ಕಗ್ಗಂಟಾಗಿದೆ. ಅರಾಜಕತೆ ಸೃಷ್ಟಿಯಾಗಿದೆ. ಉಪಾಧ್ಯಕ್ಷ ಡೆಲ್ಸಿ ರಾಡ್ರಿಗಸ್ ಹಂಗಾಮಿ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಳ್ಳುವಂತೆ ವೆನೆಜುವೆಲಾ ನ್ಯಾಯಾಲಯ ಆದೇಶಿಸಿದೆ. ಆದರೆ ಅವರಿಗೆ ಅಮೆರಿಕ ಸೇನೆಯ ಭಯವಿದೆ. ಅಮೆರಿಕ ಸೇನೆಗೆ ವೆನೆಜುವೆಲಾ ಮೇಲೆ ಯಾವುದೇ ನಿಯಂತ್ರಣ ಇಲ್ಲದಿರುವ ಕಾರಣ, ಅಲ್ಲಿನ ಆಡಳಿತವನ್ನು ಹೇಗೆ ನಿರ್ವಹಿಸಬೇಕೆಂಬುದು ಸ್ಪಷ್ಟವಾಗಿಲ್ಲ. ಅಧಿಕಾರ ವರ್ಗಾವಣೆ ಕುರಿತ ಅನಿಶ್ಚಿತತೆ ಮುಂದುವರೆದಿದೆ.



ಈ ನಡುವೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ವೆನೆಜುವೆಲಾದಲ್ಲಿ ಅಧಿಕಾರವು ನಾವು ಬಯಸಿದ ರೀತಿಯಲ್ಲಿ ವರ್ಗಾವಣೆಯಾಗುವವರೆಗೂ ಆ ದೇಶದ ಆಡಳಿತವನ್ನು ನೋಡಿಕೊಳ್ಳಲಿದ್ದೇವೆ ಎಂದು ಘೋಷಿಸಿದ್ದಾರೆ. ಒಟ್ಟಿನಲ್ಲಿ ಸ್ವತಂತ್ರ ರಾಷ್ಟ್ರ ವೆನೆಜುವೆಲಾದ ಮೇಲೆ ಸಾಮ್ರಾಜ್ಯಶಾಹಿ ಅಮೆರಿಕದ ಕೆಂಗಣ್ಣು ಬಿದ್ದಿದೆ. ಬಂಡವಾಳಶಾಹಿ ಹಿತಾಸಕ್ತಿಗಳ ಟ್ರಂಪ್, ಅದನ್ನು ಕಾರ್ಯರೂಪಕ್ಕಿಳಿಸುತ್ತಿದ್ದಾರೆ.

ವೆನೆಜುವೆಲಾ ಈ ಮೊದಲು ಸ್ಪೇನ್ ವಸಾಹತು ಕಾಲನಿಯಾಗಿದ್ದು, ಈಗ ಸ್ವತಂತ್ರ ರಾಷ್ಟ್ರವಾಗಿತ್ತು. ಪ್ರಜಾಪ್ರಭುತ್ವವನ್ನು ಅಳವಡಿಸಿಕೊಂಡಿತ್ತು. ಜನರಿಂದ ಆಯ್ಕೆಯಾದ ಜನನಾಯಕರು ಎಡಪಂಥೀಯ ವಿಚಾರಧಾರೆ ಮತ್ತು ಸಮಾಜವಾದಿ ಸಿದ್ಧಾಂತವನ್ನು ಅಳವಡಿಸಿಕೊಂಡಿದ್ದು, ಇಡೀ ಪ್ರಪಂಚದಲ್ಲಿಯೇ ಅತ್ಯುತ್ತಮ ಪಾರದರ್ಶಕ ಚುನಾವಣಾ ಪ್ರಕ್ರಿಯೆಗೆ ಒಳಪಡುವ ಪ್ರಜಾಪ್ರಭುತ್ವ ರಾಷ್ಟ್ರ ಎಂಬ ಹೆಸರು ಗಳಿಸಿತ್ತು.

ನಿಸರ್ಗದತ್ತ ಅತಿ ಹೆಚ್ಚು ತೈಲ ನಿಕ್ಷೇಪಗಳನ್ನು ಹೊಂದಿರುವ ವೆನೆಜುವೆಲಾ, ಶೇ. 80ರಷ್ಟು ಕಚ್ಚಾ ತೈಲವನ್ನು ಹೊರದೇಶಗಳಿಗೆ ರಫ್ತು ಮಾಡುವ ಮೂಲಕ ಅರ್ಥವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿತ್ತು. ಇದಷ್ಟೆ ಅಲ್ಲದೆ, ಅನಿಲ, ಚಿನ್ನ, ಬಾಕ್ಸೈಟ್, ನಿಕ್ಕಲ್, ಕಾಪರ್, ಕೋಲ್ಟೇನ್ ನಿಕ್ಷೇಪಗಳನ್ನು ಹೊಂದಿದ್ದು ಸಂಪದ್ಭರಿತ ದೇಶವೆನಿಸಿಕೊಂಡಿತ್ತು. ಆದರೆ ವೆನೆಜುವೆಲಾ ಕಚ್ಚಾ ತೈಲವನ್ನಷ್ಟೇ ರಫ್ತು ಮಾಡುತ್ತಿದ್ದು, ಅದರ ಸಂಸ್ಕರಿತ ತೈಲದ ಒಡೆತನ ಅಮೆರಿಕದ ಕೈಯಲ್ಲಿತ್ತು. ಹಲವಾರು ವರ್ಷಗಳ ಹೋರಾಟದ ಫಲವಾಗಿ ವೆನೆಜುವೆಲಾ ಸ್ಪೇನ್ ವಸಾಹುತುವಿನಿಂದ ಮುಕ್ತಿ ಪಡೆದು ಸ್ವತಂತ್ರ ರಾಷ್ಟ್ರವಾದರೂ, ದೈತ್ಯ ಅಮೆರಿಕದ ಕಪಿಮುಷ್ಟಿಯಿಂದ ಹೊರಬರಲು ಆಗಿರಲಿಲ್ಲ. ಕಚ್ಚಾ ತೈಲವನ್ನು ಅಮೆರಿಕಕ್ಕಷ್ಟೇ ಮಾರಾಟ ಮಾಡುವ ಒಪ್ಪಂದ ಮಾಡಿಕೊಂಡರೂ, ದುಷ್ಟ ಅಮೆರಿಕದ ಕುತಂತ್ರ-ಕಿರುಕುಳಗಳಿಂದ ಪಾರಾಗಲು ಸಾಧ್ಯವಾಗಿರಲಿಲ್ಲ.

ಇಲ್ಲಿಯವರೆಗೆ ದುಷ್ಟ ಅಮೆರಿಕ ಪುಟ್ಟ ದೇಶವಾದ ವೆನೆಜುವೆಲಾದ ಮೇಲೆ ಸುಮಾರು 27 ವರ್ಷಗಳಿಂದ ಎಂಟು ಬಾರಿ ಕ್ರಿಪ್ರ ಕ್ರಾಂತಿಗಳನ್ನು ಹುಟ್ಟುಹಾಕಿದೆ, ಸೋತಿದೆ. ಆದರೆ ಈಗ ಅಮೆರಿಕ ಟ್ರಂಪ್ ಕೈವಶವಾಗಿರುವುದರಿಂದ, ಆತ ಈ ಹಿಂದಿನ ಅಮೆರಿಕದ ಅಧ್ಯಕ್ಷರಂತಲ್ಲದಿರುವುದರಿಂದ, ನೇರವಾಗಿಯೇ ದಾಳಿಗೆ ಇಳಿದಿದ್ದಾರೆ. ವೆನೆಜುವೆಲಾದ ಚುನಾಯಿತ ಅಧ್ಯಕ್ಷ ಮತ್ತವರ ಪತ್ನಿಯನ್ನು ಬಂಧಿಸಿದ್ದಾರೆ.

ಅಮೆರಿಕದ ಈ ಕ್ರಮವನ್ನು ಜಗತ್ತಿನ ಹಲವು ರಾಷ್ಟ್ರಗಳು ಮತ್ತವುಗಳ ನಾಯಕರು ನೇರವಾಗಿ ಖಂಡಿಸಿದರೂ ವಲಸೆ, ಮಾದಕದ್ರವ್ಯ ಕಳ್ಳಸಾಗಾಣಿಕೆ ಮತ್ತು ಭಯೋತ್ಪಾದನೆಯನ್ನು ಹತ್ತಿಕ್ಕಲು ಈ ಕ್ರಮ ಕೈಗೊಳ್ಳಲಾಗಿದೆ ಎಂದು ಅಮೆರಿಕ ಹೇಳಿಕೊಂಡಿದೆ. ಮೇಲ್ನೋಟಕ್ಕೆ ಇದು ಕಾರಣ ಎಂದು ಕಂಡರೂ ಈ ಕಾರ್ಯಾಚರಣೆಯ ಹಿಂದೆ ತಂತ್ರವಿದೆ, ಹಲವು ಉದ್ದೇಶಗಳಿವೆ. ಅವುಗಳಲ್ಲಿ ಮುಖ್ಯವಾದುದು ವೆನೆಜುವೆಲಾದ ತೈಲ ನಿಕ್ಷೇಪಗಳು. ಅದರ ಮೇಲೆ ಕಣ್ಣಿಟ್ಟಿರುವ ಅಮೆರಿಕ ಅಲ್ಲಿನ ಸರ್ಕಾರದ ಮೇಲೆ ಹಿಡಿತ ಸಾಧಿಸಲು ಕಳೆದ 27 ವರ್ಷಗಳಿಂದ ಯತ್ನಿಸುತ್ತಲೇ ಇತ್ತು. ಚೀನಾ, ರಷ್ಯಾಗಳಿಗೆ ಹತ್ತಿರವಾಗಿ ತನ್ನ ವಿರುದ್ಧ ತೊಡೆ ತಟ್ಟಿರುವ ವೆನೆಜುವೆಲಾ ಸರ್ಕಾರವನ್ನು ಕಿತ್ತು ಒಗೆದು, ಅಲ್ಲಿ ತನ್ನನ್ನು ಬೆಂಬಲಿಸುವ ಸರ್ಕಾರವನ್ನು ಸ್ಥಾಪಿಸಲು ಹವಣಿಸುತ್ತಿತ್ತು. ಅದನ್ನು ಈಗ ಸಾಧಿಸಿಕೊಂಡಿದೆ.

ಅಮೆರಿಕಾ ಸಂಯುಕ್ತ ಸಂಸ್ಥಾನದ, ವೆನೆಜುವೆಲಾ ಮೇಲಿನ ದಾಳಿ ಮತ್ತು ಅಧ್ಯಕ್ಷ ಮಡುರೊ ಬಂಧನ, ಯಾವ ಕಾರಣದಿಂದಲೂ ನ್ಯಾಯಸಮ್ಮತವಾದುದಲ್ಲ. ಅಮೆರಿಕ ಜಗತ್ತಿನ ಮುಂದೆ ಇಡುತ್ತಿರುವ ನಾರ್ಕೋ-ಭಯೋತ್ಪಾದನೆ ಮತ್ತು ಸರ್ವಾಧಿಕಾರದ ವಿರುದ್ಧದ ಹೋರಾಟವು ಅಂತಾರಾಷ್ಟ್ರೀಯ ನಿಯಮಗಳನ್ನು ಮತ್ತು ನಾಗರಿಕ ನಡವಳಿಕೆಗಳನ್ನು ಬಹಿರಂಗವಾಗಿಯೇ ಉಲ್ಲಂಘಿಸಿದಂತಾಗುತ್ತದೆ. ಈ ಹಸ್ತಕ್ಷೇಪವು ಪ್ರಜಾಪ್ರಭುತ್ವದ ಜಾಗತಿಕ ಕಾವಲುಗಾರ ಎಂದು ಎದೆಯುಬ್ಬಿಸಿ ಹೇಳಿಕೊಳ್ಳುವ ರಾಷ್ಟ್ರವನ್ನು ಅನುಮಾನದಿಂದ ನೋಡುವಂತೆ ಮಾಡುತ್ತದೆ.

ಅಸಲಿಗೆ, ಅಮೆರಿಕಾ ಸಂಯುಕ್ತ ಸಂಸ್ಥಾನಕ್ಕೆ ಸಾರ್ವಭೌಮ ರಾಷ್ಟ್ರಗಳ ರಾಜಕಾರಣದಲ್ಲಿ, ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡಿದ ದೀರ್ಘ ಇತಿಹಾಸವೇ ಇದೆ. ಅದೆಲ್ಲವೂ ಆ ದೇಶಕ್ಕೆ ಅಪಖ್ಯಾತಿ ತಂದಿದೆ. ಈ ಹಿಂದೆ ಮೆಕ್ಸಿಕೋದಿಂದ ಕ್ಯೂಬಾ, ಹೈಟಿ, ಬ್ರೆಜಿಲ್, ಚಿಲಿ, ಪನಾಮಾಗಳಂತಹ ದೇಶಗಳು ಅಮೆರಿಕಾದ ಹಸ್ತಕ್ಷೇಪಕ್ಕೆ ಭಾರೀ ಬೆಲೆ ತೆತ್ತಿವೆ. ನೆಪಗಳು ಬದಲಾಗಬಹುದು, ಆದರೆ ಮೂಲ ಮಂತ್ರ ಒಂದೇ ಆಗಿದೆ. ಈ ಮಂತ್ರ-ತಂತ್ರಗಳು: ಕಮ್ಯುನಿಸಂನಿಂದ ಪ್ರಜಾಪ್ರಭುತ್ವವನ್ನು ಉಳಿಸುವುದು; ಭಯೋತ್ಪಾದನೆ ನಿಗ್ರಹಿಸುವುದು; ಮಾದಕವಸ್ತು ಕಳ್ಳಸಾಗಾಣಿಕೆಯನ್ನು ತಡೆಗಟ್ಟುವುದು; ಮಾನವ ಹಕ್ಕುಗಳ ಉಲ್ಲಂಘನೆಗಳನ್ನು ಪರಿಹರಿಸುವುದು; ರಾಷ್ಟ್ರಗಳನ್ನು ಸ್ಥಿರಗೊಳಿಸುವುದಾಗಿದೆ. ಅಂತಿಮವಾಗಿ ಬಳಲುವುದು ಯಾವಾಗಲೂ ಉಲ್ಲಂಘಿತ ರಾಷ್ಟ್ರಗಳೇ ಆಗಿವೆ.

ಪ್ರಜಾಪ್ರಭುತ್ವವನ್ನು ರಕ್ಷಿಸುವ ಅಥವಾ ಪ್ರಾದೇಶಿಕ ಸ್ಥಿರತೆಯನ್ನು ಕಾಪಾಡುವ ನೆಪದಲ್ಲಿ ನಡೆಸುವ ಹಸ್ತಕ್ಷೇಪವು ತತ್ವಕ್ಕಿಂತ ಹೆಚ್ಚಾಗಿ ತಂತ್ರಗಳಿಂದ ಕೂಡಿದ್ದಾಗಿದೆ. ಆರ್ಥಿಕ ಆಸಕ್ತಿಗಳಿಂದ ಪ್ರೇರಿತವಾಗಿದೆ. ಅದರಲ್ಲೂ ವಿಶೇಷವಾಗಿ ವೆನೆಜುವೆಲಾದ ವಿಶಾಲ ತೈಲ ನಿಕ್ಷೇಪಗಳ ಮೇಲಿನ ಹಿಡಿತ ಸಾಧಿಸುವ ಷಡ್ಯಂತ್ರವಿದೆ. ಹಾಗೆಯೇ ಅಮೆರಿಕಾದ ಹಸ್ತಕ್ಷೇಪದ ನಂತರ ಆ ರಾಷ್ಟ್ರಗಳ ಸಾಂವಿಧಾನಿಕ ಸಂಸ್ಥೆಗಳು ದುರ್ಬಲಗೊಂಡಿವೆ, ಅಸ್ಥಿರತೆ ದೀರ್ಘಕಾಲೀನವಾಗಿದೆ, ನಾಗರಿಕರು ಕಷ್ಟಕ್ಕೆ ಒಳಗಾಗಿದ್ದಾರೆ. ಅದಕ್ಕಿಂತಲೂ ಹೆಚ್ಚಾಗಿ ಅಮೆರಿಕಾದಿಂದ ನಿಯೋಜನೆಗೊಂಡ ಸರ್ಕಾರಗಳು, ಸ್ಥಳೀಯ ಜನರ ಇಚ್ಚೆಗೆ ವಿರುದ್ಧವಾಗಿ ನಡೆದುಕೊಂಡಿವೆ. ಅಮೆರಿಕಾದ ಇಂತಹ ವಿಸ್ತರಣಾವಾದವು, ರಾಷ್ಟ್ರಗಳಿಗೆ ತಮ್ಮ ಸ್ವಂತ ರಾಜಕೀಯ ಭವಿಷ್ಯವನ್ನು ನಿರ್ಧರಿಸುವ ಮೂಲಭೂತ ಹಕ್ಕನ್ನು ನಿರಾಕರಿಸುತ್ತದೆ.

ವೆನೆಜುವೆಲಾದ ನಿಕೊಲಸ್ ಮಡುರೊ ಅವರ ಬಂಧನವು 1989ರ ಪನಾಮಾ ಆಕ್ರಮಣವನ್ನು ಹಾಗೂ ಮ್ಯಾನುಯೆಲ್ ನೊರಿಗಾ ಅವರ ಬಂಧನವನ್ನು ನೆನಪಿಸುತ್ತಿದೆ. ಇದು ಕೂಡ ಮಾದಕ ದ್ರವ್ಯ ಕಳ್ಳಸಾಗಣೆ ಆರೋಪಗಳ ಮೇಲೆ ನ್ಯಾಯಸಮ್ಮತಗೊಳಿಸಲಾದ ಮತ್ತೊಂದು ಘಟನೆ. ಆ ಹಸ್ತಕ್ಷೇಪವು ನೂರಾರು ನಾಗರಿಕರ ಮಾರಣಹೋಮಕ್ಕೆ ಕಾರಣವಾಯಿತು. ನಂತರ ಅಮೆರಿಕಾ ಬೆಂಬಲಿತ ಸರ್ಕಾರವನ್ನು ಸ್ಥಾಪಿಸಿತು. ಇದರ ಫಲವಾಗಿ ಪನಾಮಾ ದ್ವೀಪರಾಷ್ಟ್ರ ದೀರ್ಘಕಾಲೀನ ರಾಜಕೀಯ ಅಸ್ಥಿರತೆಯನ್ನು ಎದುರಿಸಬೇಕಾಯಿತು. ಮತ್ತು ಸಾಮಾಜಿಕ ಪರಿಣಾಮಗಳನ್ನು ಅನುಭವಿಸಬೇಕಾಯಿತು.

ಈಗ ಅದೇ ಮಂತ್ರ-ತಂತ್ರಗಳನ್ನು ವೆನೆಜುವೆಲಾದ ಮೇಲೂ ಪ್ರಯೋಗಿಸಲಾಗುತ್ತಿದೆ. ಅಮೆರಿಕದ ಅಧ್ಯಕ್ಷ ಟ್ರಂಪ್, ನಾವು ಬಯಸಿದ ರೀತಿಯಲ್ಲಿ ವರ್ಗಾವಣೆಯಾಗುವವರೆಗೂ ಆ ದೇಶದ ಆಡಳಿತವನ್ನು ನೋಡಿಕೊಳ್ಳಲಿದ್ದೇವೆ ಎಂದಿದ್ದಾರೆ. ಅಂದರೆ ಅಮೆರಿಕ ಬಯಸುವ ರೀತಿಯ ಆಡಳಿತ ಎಂಬುದು ಸ್ಪಷ್ಟ. ಈ ಹೇಳಿಕೆ ಲ್ಯಾಟಿನ್ ಅಮೆರಿಕ ರಾಷ್ಟ್ರಗಳಲ್ಲಿ ಆತಂಕವನ್ನು ಹೆಚ್ಚಿಸಿದೆ. ವೆನೆಜುವೆಲಾ ಜನತೆ ಮುಂದೆ ದೀರ್ಘಕಾಲೀನ ಅಸ್ಥಿರತೆ, ಅಧಿಕಾರದ ಛಿದ್ರತೆ ಮತ್ತು ವಿದೇಶಿ ಆಸಕ್ತಿಗಳಿಂದ ರೂಪಿಸಲ್ಪಟ್ಟ ಭವಿಷ್ಯವನ್ನು ಕಣ್ಣೆದುರು ತಂದು ನಿಲ್ಲಿಸುತ್ತಿದೆ.

ವಿಶ್ವಶಾಂತಿ..? ಏತನ್ಮಧ್ಯೆ, ಯುದ್ಧ ಮಾಡಬಾರದು ಎಂದು ಜಗತ್ತಿಗೆ ಉಪದೇಶ ಮಾಡುತ್ತಲೇ ಅಧಿಕಾರಕ್ಕೆ ಬಂದ ಟ್ರಂಪ್, ಇರಾನ್ ಮೇಲೆ ಯುದ್ಧ ಸಾರಿದರು. ಹದಿನೈದು ದಿನಗಳ ಹಿಂದೆ ಇದೇ ನಿಕ್ಷೇಪಗಳಿಗಾಗಿ ನೈಜೀರಿಯಾ ಮೇಲೆ ಬಾಂಬ್ ಹಾಕಿದರು. ಈಗ ವೆನೆಜುವೆಲಾ ಮೇಲೆ ದಾಳಿ ಮಾಡಿದ್ದಾರೆ. ಭಾರತ-ಪಾಕಿಸ್ತಾನ ನಡುವಿನ ಯುದ್ಧ ನಿಲ್ಲಿಸಿದ್ದು ನಾನೆ ಎಂದು ಹೇಳಿಕೊಳ್ಳುವ ಟ್ರಂಪ್, ನೊಬೆಲ್ ಶಾಂತಿ ಪ್ರಶಸ್ತಿಗಾಗಿ ಹಪಾಹಪಿಸಿದ್ದೂ ಇದೆ.

ಇತ್ತೀಚೆಗೆ, ಎಪ್‌ಸ್ಟೀನ್ ಫೈಲ್‌ಗಳಲ್ಲಿ ಅಮೆರಿಕ ಅಧ್ಯಕ್ಷ ಟ್ರಂಪ್ ಹೆಸರು ಬಯಲಾದ ನಂತರ, ಅಮೆರಿಕದ ಜನತೆಗೆ ಅವರ ಮೇಲಿನ ವಿಶ್ವಾಸ ಹೋಗಿದೆ. ಅದು ಅವರ ಸ್ಥಾನಮಾನ ಮತ್ತು ಪ್ರತಿಷ್ಠೆಗೆ ಧಕ್ಕೆ ತಂದು ವ್ಯಕ್ತಿತ್ವಕ್ಕೆ ಹಾನಿಯುಂಟುಮಾಡಿದೆ. ಇದರಿಂದ ಅಮೆರಿಕನ್ನರ ಗಮನವನ್ನು ಬೇರೆಡೆಗೆ ಸೆಳೆಯುವ ಸಲುವಾಗಿ ಟ್ರಂಪ್, ವೆನೆಜುವೆಲಾ ಮೇಲೆ ದಾಳಿ ಮಾಡಿ, ಅಧ್ಯಕ್ಷ ಮಡುರೊ ಬಂಧಿಸುವ ನಾಟಕಕ್ಕೆ ಕೈ ಹಾಕಿದ್ದಾರೆಂಬ ವಿಶ್ಲೇಷಣೆಗಳೂ ಇವೆ. ಅಮೆರಿಕದ ಸಾಮ್ರಾಜ್ಯಶಾಹಿ ದುಷ್ಟತನವನ್ನು ಹಾಗೂ ಅಧ್ಯಕ್ಷ ಟ್ರಂಪ್ ಅವರ ಬಂಡವಾಳಶಾಹಿ ಕಿಡಿಗೇಡಿ ಕೃತ್ಯವನ್ನು ಬಲಿಷ್ಠ ರಾಷ್ಟ್ರಗಳೆನಿಸಿಕೊಂಡ ಚೀನಾ, ರಷ್ಯಾ ಖಂಡಿಸಿವೆ. ಆದರೆ ಭಾರತದ ಪ್ರಧಾನಿ ಮೋದಿಯವರು ಯಥಾಪ್ರಕಾರ, ಟ್ರಂಪ್ ಪರ ಮೃದುಧೋರಣೆ ತಳೆದು, ನೆಪಮಾತ್ರದ ಹೇಳಿಕೆ ನೀಡಿ ಕೈ ತೊಳೆದುಕೊಂಡಿದ್ದಾರೆ. ವಿಶ್ವಸಂಸ್ಥೆ ಕೂಡ ಪಕ್ಷಪಾತಿಯಾಗಿಯೇ ವರ್ತಿಸಿದೆ. ಬಲಿಷ್ಠ ಅಮೆರಿಕದ ಸ್ವಾರ್ಥ, ವಿಸ್ತರಣಾದಾಹವನ್ನು ಉಗ್ರವಾಗಿ ಖಂಡಿಸಿ, ವೆನೆಜುವೆಲಾ ಜನತೆಯ ಸಾರ್ವಭೌಮತೆಯ ಜೊತೆಗೆ ನಿಲ್ಲದಿದ್ದರೆ- ಇವತ್ತು ವೆನೆಜುವೆಲಾಗೆ ಆಗಿದ್ದು, ನಾಳೆ ನಮಗೂ ಆಗಬಹುದು.

ಗೃಹಲಕ್ಷ್ಮಿ ಹಣದ ಬಗ್ಗೆ ಕೇಳಲು ಬಿಜೆಪಿಯವರಿಗೆ ನೈತಿಕತೆ ಇದೆಯಾ?: ಸಚಿವ ಲಾಡ್

ಧಾರವಾಡ,ಜ.05-

ಎರಡು ತಿಂಗಳ ಗೃಹಲಕ್ಷ್ಮಿ ಹಣ ಕೊಡದಿದ್ದಕ್ಕೆ ಇಷ್ಟು ಮಾತನಾಡುತ್ತಾರೆ, 15 ಲಕ್ಷ ರೂಪಾಯಿ ಕೊಡುತ್ತೇವೆ ಎಂದು ಎದೆ ಬಡಿದುಕೊಂಡು ಇಡೀ ದೇಶ ತಿರುಗಾಡಿದರಲ್ಲ, ಇವರಿಗೆ ಈ ಬಗ್ಗೆ ಕೇಳಲು ಅರ್ಹತೆ ಇದೆಯಾ? ಎಂದು ಸಚಿವ ಸಂತೋಷ್ ಲಾಡ್ ಬಿಜೆಪಿ ನಾಯಕರ ವಿರುದ್ಧ ಹರಿಹಾಯ್ದರು.

ನಗರದಲ್ಲಿಂದು ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಫಲಾನುಭವಿಗಳಿಗೆ ಗೃಹಲಕ್ಷ್ಮಿ ಹಣ ಇನ್ನೂ ಬಂದಿಲ್ಲ ಎಂಬ ಬಿಜೆಪಿ ನಾಯಕರ ಆರೋಪದ ಬಗ್ಗೆ ಪ್ರತಿಕ್ರಿಯಿಸಿ, ಎರಡು ತಿಂಗಳ ಗೃಹಲಕ್ಷ್ಮಿ ಹಣ ಕೊಟ್ಟಿಲ್ಲ, ಈ ಸಂಬಂಧ ಮುಖ್ಯಮಂತ್ರಿಗಳು ಸದನದಲ್ಲಿ ಸಮರ್ಪಕವಾಗಿ ಉತ್ತರ ಕೊಟ್ಟಿದ್ದಾರೆ. 25 ತಿಂಗಳ ಪೈಕಿ 23 ತಿಂಗಳು ಗೃಹಲಕ್ಷ್ಮಿ ಹಣ ಕೊಟ್ಟಿದ್ದೇವೆ. ಬೇರೆ ರಾಜ್ಯಗಳಲ್ಲಿ ಚುನಾವಣೆಗೋಸ್ಕರ ಹಣ ಕೊಡುತ್ತಿದ್ದಾರಲ್ಲ, ಇವರಿಗೆ ಯಾವ ನೈತಿಕತೆ ಇದೆ ಕೇಳಲು?. ಮುಂಬರುವ ದಿನಗಳಲ್ಲಿ ಫಲಾನುಭವಿಗಳಿಗೆ ಹಣ ಕೊಡುತ್ತೇವೆ ಎಂದು ತಿರುಗೇಟು ಕೊಟ್ಟರು.

ಓಂ ಶಕ್ತಿ ಮಾಲಾಧಾರಿಗಳ ಮೇಲೆ ಕಲ್ಲೆಸೆದಿರುವ ವಿಚಾರವಾಗಿ ಮಾತನಾಡಿ, ಯಾರು ಕಲ್ಲೆಸೆದಿದ್ದಾರೆ ಎಂದು ಸರ್ಕಾರ ಪತ್ತೆ ಹಚ್ಚುತ್ತದೆ. ಗಲಾಟೆ ಆಗಿದ್ದು ನಿಜ, ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಲಿದೆ ಎಂದರು.

ಜನಾರ್ದನ ರೆಡ್ಡಿ ಹತ್ಯೆಗೆ ಸಂಚು ರೂಪಿಸಿದ್ದಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಸಂಚು ಯಾರು ಮಾಡಿದ್ದಾರೆ ಅನ್ನೋದು ತನಿಖೆ ಬಳಿಕ ಗೊತ್ತಾಗಲಿದೆ ಎಂದ ಅವರು, ಬಳ್ಳಾರಿ ರಿಪಬ್ಲಿಕ್ ವಿಚಾರವಾಗಿ ಮಾತನಾಡಿ, ರಿಪಬ್ಲಿಕ್‌ಗೆ ರಿಪೋರ್ಟ್ ಕೊಟ್ಟವರು ಯಾರು, ರಿಪಬ್ಲಿಕ್ ಅಂತ ಕೊಟ್ಟಿದ್ದು ಸಂತೋಷ್ ಹೆಗ್ಡೆ ಸಾಹೇಬರು. ಅವರು ಅದರ ಬಗ್ಗೆ ಬರೆದಿದ್ದಾರೆ, ಅದನ್ನು ಓದಲು ಹೇಳಿ. ಆದರೆ ಘಟನೆ ಆಗಿದ್ದರ ಬಗ್ಗೆ ನಾನು ಒಪ್ಪಿಕೊಳ್ಳಲ್ಲ ಎಂದರು.

ಸಚಿವ ಈಶ್ವರ ಖಂಡ್ರೆ ಮುಂದೆಯೇ ಕೈಕೈ ಮಿಲಾಯಿಸಿದ ಬಿಜೆಪಿ- ಕಾಂಗ್ರೆಸ್ ಶಾಸಕರು!



ಬೀದರ,ಜ3.05-

ಜಿಲ್ಲಾ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆ ವೇಳೆ ಶಾಸಕ ಸಿದ್ದು ಪಾಟೀಲ್ ಮತ್ತು ಎಂಎಲ್‌ಸಿ ಭೀಮರಾವ್ ಪಾಟೀಲ್ ಪರಸ್ಪರ ಕೈಕೈ ಮಿಲಾಯಿಸಿದ ಘಟನೆ ನಡೆಯಿತು. ಈ ಇಬ್ಬರೂ ಜನಪ್ರತಿನಿಧಿಗಳನ್ನು ಸಮಾಧಾನ ಮಾಡಲು ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಸೇರಿದಂತೆ ಉಪಸ್ಥಿತರಿದ್ದ ಗಣ್ಯರು ಹರಸಾಹಸಪಟ್ಟರು.

ಬೀದರ್ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರ ನೇತೃತ್ವದಲ್ಲಿ ಕೆಡಿಪಿ ಸಭೆ ನಡೆಯುತ್ತಿತ್ತು. ಈ ವೇಳೆ, ಸಭೆಯ ಆರಂಭದಲ್ಲೇ ಲೇಔಟ್ ವಿಚಾರವಾಗಿ ಹುಮನಾಬಾದ್ ಬಿಜೆಪಿ ಶಾಸಕ ಸಿದ್ದು ಪಾಟೀಲ್ ಹಾಗೂ ಪರಿಷತ್ ಬಿಜೆಪಿ ಸದಸ್ಯ ಭೀಮರಾವ್ ಪಾಟೀಲ್ ಮಧ್ಯೆ ಮಾತಿಗೆ ಮಾತು ಬೆಳೆದು ಕೈಕೈ ಮಿಲಾಯಿಸುವ ಹಂತಕ್ಕೆ ಹೋಯಿತು. ಜೊತೆಗೆ ಪರಸ್ಪರರು ಅವಾಚ್ಯ ಪದ ಬಳಸಿ ನಿಂದಿಸಿದರು. ಎಮ್‌ಎಲ್‌ಸಿ ಚಂದ್ರಶೇಖರ್ ಪಾಟೀಲ್ ಕೂಡ ಮಧ್ಯಪ್ರವೇಶಿಸಿ ಭೀಮರಾವ್ ಪಾಟೀಲ್ ಅವರ ಬೆಂಬಲಕ್ಕೆ ನಿಂತರು.

ಇದರಿಂದ ಸಭೆಯಲ್ಲಿ ಗೊಂದಲ ಉಂಟಾಗಿ, ಕೆಲಕಾಲ ಸಭೆಯನ್ನು ಸಚಿವ ಖಂಡ್ರೆ ಅವರು ಮುಂದೂಡಿದರು. ಬಳಿಕ ಸಿದ್ದು ಪಾಟೀಲ್ ಮತ್ತು ಭೀಮರಾವ್ ಪಾಟೀಲ್ ಅವರನ್ನು ಸಮಾಧಾನ ಮಾಡಿ ಹೊರಗಡೆ ಕರೆದೊಯ್ಯಲಾಯಿತು.

ಸಭೆಯಲ್ಲಿ ಸಚಿವ ರಹೀಂ ಖಾನ್, ಡಿಸಿ ಶಿಲ್ಪಾ ಶರ್ಮಾ, ಸಿಇಓ ಗಿರೀಶ್ ಬೋಧಲೆ, ಎಸ್ಪಿ ಪ್ರದೀಪ್ ಗುಂಟೆ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಭಾಗಿಯಾಗಿದ್ದರು.

ವೆನೆಜುವೆಲಾ ಮೇಲೆ ಅಮೆರಿಕ ದಾಳಿ ಖಂಡಿಸಿ ಸಿಪಿಎಂ ಪ್ರತಿಭಟನೆ



ಕಲಬುರಗಿ,ಜ.05-

ವೆನೆಜುವೆಲಾ ದೇಶದ ವಿವಿಧ ಸ್ಥಳಗಳ ಮೇಲೆ ಅಮೆರಿಕ ಬಾಂಬ್ ದಾಳಿ ನಡೆಸಿರುವ ಕೃತ್ಯನ್ನು ಖಂಡಿಸಿ ಸಿಪಿಎಂ ವತಿಯಿಂದ ಇಲ್ಲಿನ ತಿಮ್ಮಾಪುರಿ ಚೌಕ್ ಸಮೀಪ ರವಿವಾರ ಪ್ರತಿಭಟನೆ ನಡೆಯಿತು.

ಕೆಲವು ವಾರಗಳಿಂದ ಅಮೆರಿಕವು ವೆನೆಜುವೆಲಾದಲ್ಲಿ ಆಳ್ವಿಕೆಯನ್ನು ಬದಲಾಯಿಸಲು ಬಲವಂತವಾಗಿ ಆ ದೇಶದ ಸುತ್ತಲೂ ತನ್ನ ಮಿಲಿಟರಿ ಮತ್ತು ನೌಕಾಪಡೆಗಳನ್ನು ಸಜ್ಜುಗೊಳಿಸಿದೆ. ಇಡೀ ಪ್ರದೇಶವನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳುವ ಉದ್ದೇಶದಿಂದ ವೆನೆಜುವೆಲಾದ ಮೇಲೆ ದಾಳಿ ನಡೆಸಿದೆ. ಇದನ್ನು ಭಾರತ ದೇಶ ಸೇರಿದಂತೆ ಇಡೀ ವಿಶ್ವದ ಎಲ್ಲ ರಾಷ್ಟ್ರಗಳು ಖಂಡಿಸಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಅಮೆರಿಕದ ಆಕ್ರಮಣವನ್ನು ವಿಶ್ವಸಂಸ್ಥೆ ಖಂಡಿಸಬೇಕು, ಅದಕ್ಕಾಗಿ ನಿರ್ಣಯ ತೆಗೆದುಕೊಂಡು ದಾಳಿಯನ್ನು ತಕ್ಷಣವೇ ನಿಲ್ಲಿಸುವಂತೆ ಅಮೆರಿಕದ ಮೇಲೆ ಒತ್ತಡ ಹೇರಬೇಕು ಎಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಸಿಪಿಎಂ ಜಿಲ್ಲಾ ಕಾರ್ಯದರ್ಶಿ ಕೆ.ನೀಲಾ, ಡಾ.ಮೀನಾಕ್ಷಿ ಬಾಳಿ, ಪಾಂಡುರಂಗ ಮಾವಿನಕರ, ಎಂ. ಬಿ ಸಜ್ಜನ್, ಲವಿತ್ರ ವಸ್ತ್ರದ್, ಬಾಬು ಹೂವಿನಹಳ್ಳಿ, ಪದ್ಮಿನಿ ಕಿರಣಗಿ, ಕೋದಂಡರಾಮ, ಶೇಖಮ್ಮ ಕುರಿ, ಲಲಿತಾ, ಸಲ್ಮಾನ್ ಖಾನ್ ಆಳಂದ, ಕೆ.ಎಸ್.ಶಾರದಾ, ಸರ್ವೇಶ್, ನಾಗಪ್ಪ ರಾಯಚೂರು, ಯಶವಂತ ಪಾಟೀಲ್, ಪ್ರಮೋದ್ ಪಾಂಚಾಳ, ಭೀಮಶೆಟ್ಟಿ ಯಂಪಳ್ಳಿ, ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಉತ್ತರ ಕರ್ನಾಟಕದ ಜಾನಪದ ಸಾಹಿತ್ಯ, ಮಹಿಳೆಯರ ಗೌರವಕ್ಕೆ ಮಸಿ ಬಳಿಯುತ್ತಿರುವ ಅಶ್ಲೀಲ ಗೀತೆಗಳಿಗೆ ಕಡಿವಾಣ ಅಗತ್ಯ



ಉತ್ತರ ಕರ್ನಾಟಕದ ಜಾನಪದ ಸಾಹಿತ್ಯವು ತನ್ನದೇ ಆದ ಘನತೆ, ಪರಂಪರೆ ಮತ್ತು ಸಾಂಸ್ಕೃತಿಕ ಹಿರಿಮೆಯನ್ನು ಹೊಂದಿದೆ. ಸೋಬಾನೆ ಪದಗಳು, ಹಂತಿ ಪದಗಳು, ಗೀಗಿ ಪದಗಳು, ಗೌರಿ ಹಬ್ಬ, ಹೋಳಿ ಹಬ್ಬ, ಮೊಹರಂ, ಡೊಳ್ಳಿನ ಪದಗಳು, ದುರ್ಗಮುರಗಿ ಪದಗಳು ಸೇರಿದಂತೆ ಕರಡಿ ಮಜಲು, ಸೋಮನ ಕುಣಿತ, ಪೂಜಾ ಕುಣಿತ, ಕೃಷ್ಣ ಪಾರಿಜಾತ, ಬಯಲಾಟ ಮುಂತಾದ ಜಾನಪದ ಹಾಡು ನೃತ್ಯ ಪ್ರಕಾರಗಳು ನಾಡಿನ ಜನಪದ ಸಂಸ್ಕೃತಿಯನ್ನು ಶ್ರೀಮಂತಗೊಳಿಸಿವೆ.

ಇತ್ತೀಚಿನ ದಿನಗಳಲ್ಲಿ ಕೆಲ ಹಾಡುಗಾರರು ಜಾನಪದದ ಹೆಸರಿನಲ್ಲಿ ಅಶ್ಲೀಲ ಹಾಗೂ ಅಸಭ್ಯ ಭಾಷೆ ಬಳಸಿ ಹಾಡುಗಳನ್ನು ರಚಿಸಿ ಹಾಡುತ್ತಿರುವುದು ಹಾಗೂ ಯುಟ್ಯೂಬ್ ಮೂಲಕ ಅವುಗಳಿಂದ ಮಹಿಳೆಯರಿಗೆ ಮುಜುಗರ ಉಂಟುಮಾಡುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಇದರಿಂದ ಉತ್ತರ ಕರ್ನಾಟಕದ ಜಾನಪದ ಸಾಹಿತ್ಯಕ್ಕೆ ಮಸಿ ಬಳಿದಂತಾಗಿದ್ದು, ಪ್ರದೇಶದ ಸಾಂಸ್ಕೃತಿಕ ಗೌರವಕ್ಕೆ ಧಕ್ಕೆಯುಂಟಾಗುತ್ತಿದೆ ಎಂದು ಉತ್ತರ ಕರ್ನಾಟಕದ ಪ್ರಗತಿಪರ ಚಿಂತಕರು ಆರೋಪಿಸಿದ್ದಾರೆ.

ಮಹಿಳೆಯರನ್ನು ಗುರಿಯಾಗಿಸಿಕೊಂಡು ಅವರ ಮಾನಮರ್ಯಾದೆ ಹಾಗೂ ತೇಜಸ್ಸಿ ಗೆ ಧಕ್ಕೆ ತರುವ ಪದಗಳ ಬಳಕೆ ನಾಚಿಕೆಗೇಡಿನ ಸಂಗತಿಯಾಗಿದ್ದು, ಜಾನಪದ ಎಂಬ ಪವಿತ್ರ ಪರಂಪರೆಗೆ ಅವಮಾನ ಮಾಡುತ್ತಿದ್ದಾರೆ.

ಅಶ್ಲೀಲ ಜಾನಪದ ಹಾಡುಗಳ ವಿರುದ್ಧ ಹೋರಾಟ ನಡೆಸುತ್ತಿರುವ ಸಾಮಾಜಿಕ ಹೋರಾಟಗಾರ ಶ್ರೀನಿವಾಸಗೌಡ ಪಾಟಿಲ್ ಅವರು ಈ ದಿನ.ಕಾಮ್ ಜತೆ ಮಾತನಾಡಿ, ''ಅಶ್ಲೀಲ ಪದಗಳನ್ನು ಬಳಸಿಕೊಂಡು ಜಾನಪದ ಗೀತೆಗಳೆಂದು ಬಿಂಬಿಸಲಾಗುತ್ತಿದ್ದು, ಇದರಿಂದ ಯುವಜನರನ್ನು ದಾರಿ ತಪ್ಪಿಸಲಾಗುತ್ತಿದೆ. ಇದರ ಪರಿಣಾಮವಾಗಿ ಉತ್ತರ ಕರ್ನಾಟಕದ ಸಂಸ್ಕೃತಿ ಹಾಳಾಗುತ್ತಿದೆ'' ಎಂದು ಆಕ್ರೋಶ ವ್ಯಕ್ತಪಡಿಸಿದರು.

''ಈ ವಿಷಯವಾಗಿ ಬೆಳಗಾವಿಯ ಪ್ರಾದೇಶಿಕ ಆಯುಕ್ತರು ಹಾಗೂ ಪೊಲೀಸ್ ಮಹಾನಿರೀಕ್ಷಕರಿಗೆ ಮನವಿ ಸಲ್ಲಿಸಿದ್ದೇನೆ. ಅಶ್ಲೀಲ ಹಾಗೂ ಅಸಭ್ಯ ಜಾನಪದ ಗೀತೆಗಳನ್ನು ರಚಿಸಿ ಸಾರ್ವಜನಿಕವಾಗಿ ಪ್ರಸಾರ ಮಾಡುವವರ ವಿರುದ್ಧ ಐಟಿ ಕಾಯ್ದೆ2000 ಹಾಗೂ ಬಿಎನ್‌ಎಸ್ ಸೆಕ್ಷನ್ 296 ಸೇರಿದಂತೆ ಇತರೆ ಸಂಬಂಧಿತ ಕಾನೂನುಗಳಡಿ ಕಠಿಣ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿದ್ದೇನೆ'' ಎಂದು ತಿಳಿಸಿದರು.

''ಟ್ರ್ಯಾಕ್ಟರ್‌ಗಳಲ್ಲಿ, ಮೆರವಣಿಗೆಗಳಲ್ಲಿ ಹಾಗೂ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಇಂತಹ ಅಶ್ಲೀಲ ಜಾನಪದ ಗೀತೆಗಳನ್ನು ಸಂಪೂರ್ಣವಾಗಿ ನಿಷೇಧಿಸಬೇಕು'' ಎಂದು ಆಗ್ರಹಿಸಿದರು.

ಈ ಕುರಿತು ಉತ್ತರ ಕರ್ನಾಟಕದ ಪ್ರಖ್ಯಾತ ಜಾನಪದ ಹಾಡುಗಾರ ಶಬ್ಬೀರ್ ಡಾಂಗೆ ಈ ದಿನ.ಕಾಮ್ ಜತೆ ಮಾತನಾಡಿ, ''ಕೆಲವರು ಜಾನಪದ ಹೆಸರಿನಲ್ಲಿ ಮಡಿವಂತಿಕೆ ಇಲ್ಲದೆ ಹಾಡುಗಳನ್ನು ಹಾಡುತ್ತಿದ್ದಾರೆ. ನಾಚಿಕೆ, ಮಾನಮರ್ಯಾದೆ ಬಿಟ್ಟು ಹೈಸ್ಕೂಲ್ ಹಾಗೂ ಕಾಲೇಜು ಹುಡುಗಿಯರ ಹೆಸರಿನಲ್ಲಿ ಹಾಡುಗಳನ್ನು ಹಾಡಲಾಗುತ್ತಿದೆ. ಇದರಿಂದ ಹೆಣ್ಣು ಮಕ್ಕಳಿಗೆ ಅವಮಾನವಾಗುತ್ತಿದೆ'' ಎಂದು ಆತಂಕ ವ್ಯಕ್ತಪಡಿಸಿದರು.

''ಈ ಹಿನ್ನೆಲೆ ಅಶ್ಲೀಲ ಜಾನಪದ ಹಾಡುಗಳ ವಿರುದ್ಧ ಸಭೆ ನಡೆಸಿ, ಇಂತಹ ಹಾಡುಗಳನ್ನು ರಚಿಸಿ ಹಾಡಬಾರದೆಂದು ಕಲಾವಿದರಿಗೆ ತಿಳಿಸಲಾಗಿದೆ. ಈ ಕ್ರಮಕ್ಕೆ ಹಂಪಿ ವಿಶ್ವವಿದ್ಯಾಲಯದವರು ಮೆಚ್ಚುಗೆ ವ್ಯಕ್ತಪಡಿಸಿದ್ದು, ಸರ್ಕಾರದ ಮಟ್ಟದಲ್ಲೂ ಹೋರಾಟ ಮಾಡುತ್ತೇವೆ'' ಎಂದು ಹೇಳಿದರು.

''ಜಾನಪದ ಸಾಹಿತ್ಯ ಜನರಿಂದಲೇ ಹುಟ್ಟಿಕೊಂಡಿದ್ದು, ಇಂದು ಜನರು ಉತ್ತಮ ಜಾನಪದ ಗೀತೆಗಳನ್ನು ಕೇಳುವುದನ್ನು ಬಿಟ್ಟು ಅಶ್ಲೀಲ ಪದಗಳಿರುವ ಸಾಹಿತ್ಯವನ್ನು ಕೇಳುತ್ತಿರುವುದು ದುರಂತವಾಗಿದೆ. ಮೊದಲು ಜನರು ಇಂತಹ ಹಾಡುಗಳನ್ನು ಕೇಳುವುದನ್ನು ನಿಲ್ಲಿಸಿದಾಗ ಮಾತ್ರ ಅಶ್ಲೀಲ ಜಾನಪದ ಗೀತೆಗಳಿಗೆ ಕಡಿವಾಣ ಹಾಕಲು ಸಾಧ್ಯವಾಗುತ್ತದೆ'' ಎಂದು ಶಬ್ಬೀರ್ ಡಾಂಗೆ ಹೇಳಿದರು.

''ಕೆಲವು ಹೆಣ್ಣು ಮಕ್ಕಳೂ ಕೂಡ ಅಶ್ಲೀಲ ಪದಗಳನ್ನು ಬಳಸಿ ಹಾಡುತ್ತಿರುವುದು ಜಾನಪದ ಸಾಹಿತ್ಯದ ಮಾನಮರ್ಯಾದೆಯನ್ನು ಹಾಳು ಮಾಡುತ್ತಿದೆ. ಇದರ ವಿರುದ್ಧ ಹೋರಾಟ ಮುಂದುವರಿಸಲಾಗುವುದು'' ಎಂದು ಹೇಳಿದರು.

ಮಹಿಳೆಯರ ಗೌರವಕ್ಕೆ ಧಕ್ಕೆ ತರುವ ಈ ಕ್ರಿಯೆಗಳನ್ನು ತಡೆಹಿಡಿಯಲು ಹಲವಾರು ಕಾನೂನು ಕ್ರಮಗಳು ಕಾಯ್ದಿರಿಸಲಾಗಿದೆ.

1.ಐಟಿ ಕಾಯ್ದೆ, 2000(, 2000) ಸೆಕ್ಷನ್ 66 / 66 / 67: ಇಂಟರ್ನೆಟ್, ಯುಟ್ಯೂಬ್, ಸಾಮಾಜಿಕ ಮಾಧ್ಯಮದಲ್ಲಿ ಅಶ್ಲೀಲ, ಕಿರುಕುಳ ಅಥವಾ ಮಾನಹಾನಿ ಮಾಡುವ ವಿಷಯ ಪ್ರಸಾರಕ್ಕೆ ಸಂಬಂಧ.

ಉದಾಹರಣೆ: ಯುಟ್ಯೂಬ್‌ನಲ್ಲಿ ಮಹಿಳೆಯರ ಗೌರವಕ್ಕೆ ಧಕ್ಕೆ ತರುವ ಹಾಡುಗಳನ್ನು ಅಪ್ಲೋಡ್ ಮಾಡಿದರೆ, ದಂಡ ಅಥವಾ ಜೈಲು ಶಿಕ್ಷೆಯಾಗಬಹುದು. ಇಲ್ಲವೇ ಎರಡೂ ಶಿಕ್ಷೆಗಳೂ ಆಗಬಹುದು.

2. ಸೆಕ್ಷನ್ 296 : ಸಾರ್ವಜನಿಕವಾಗಿ ಪವಿತ್ರ ಪದ ಅಥವಾ ಸಂಸ್ಕೃತಿಗೆ ಧಕ್ಕೆ ತರುವ ಕಾರ್ಯಗಳು ಅಂದರೆ ಜಾನಪದ ಪರಂಪರೆಯನ್ನು ಅವಮಾನ ಮಾಡುವ ಅಶ್ಲೀಲ ಹಾಡುಗಳನ್ನು ಸಾರ್ವಜನಿಕ ಕಾರ್ಯಕ್ರಮದಲ್ಲಿ ಹಾಡಿದರೆ ಜೈಲು ಮತ್ತು ದಂಡ, 3 ತಿಂಗಳ ಜೈಲು ಶಿಕ್ಷೆ ಮತ್ತು 1000 ದಂಡದ ಶಿಕ್ಷೆಯಾಗುತ್ತದೆ.

2000ನೇ ಇಸವಿಯ ಐಟಿ ಕಾಯ್ದೆಯ ಸೆಕ್ಷನ್ 67 : ಎಲೆಕ್ಟ್ರಾನಿಕ್ ರೂಪದಲ್ಲಿ ಲೈಂಗಿಕವಾಗಿ ಸ್ಪಷ್ಟವಾದ ಕೃತ್ಯಗಳನ್ನು ಹೊಂದಿರುವ ವಿಷಯವನ್ನು ಪ್ರಕಟಿಸುವ ಅಥವಾ ಹಂಚಿಕೊಳ್ಳುವ ಶಿಕ್ಷೆಯ ಬಗ್ಗೆ 2000ನೇ ಇಸವಿಯ ಐಟಿ ಕಾಯ್ದೆಯ ಸೆಕ್ಷನ್ 67 ಕಾಯ್ದೆ ವ್ಯವಹರಿಸುತ್ತದೆ.

ಮೊದಲನೇ ಅಪರಾಧ ಸಾಬೀತಾದಾಗ, ಅಂತಹ ವಿಷಯವನ್ನು ಪ್ರಕಟಿಸುವ ವ್ಯಕ್ತಿಗಳು 3 ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು 5 ಲಕ್ಷ ರೂಪಾಯಿಗಳವರೆಗೆ ದಂಡವನ್ನು ಎದುರಿಸಬೇಕಾಗುತ್ತದೆ. ಎರಡನೇ ಅಥವಾ ನಂತರದ ಅಪರಾಧ ಸಾಬೀತಾದರೆ, ಶಿಕ್ಷೆಯು 5 ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು 10 ಲಕ್ಷ ರೂಪಾಯಿವರೆಗೆ ದಂಡವನ್ನು ವಿಧಿಸಬಹುದು.

ಮಹಿಳೆಯರ ಗೌರವ ಕಾಪಾಡುವುದು, ಯುವಜನರನ್ನು ತಪ್ಪುದಾರಿಗೆ ಹೋಗುವುದನ್ನು ತಪ್ಪಿಸುವುದನ್ನು, ಸಾಮಾಜಿಕ ಶಾಂತಿ ಮತ್ತು ನೈತಿಕತೆ ಕಾಯ್ದುಕೊಳ್ಳುವುದು ಈ ಕಾನೂನುಗಳ ಉದ್ದೇಶವಾಗಿದೆ.

ಉತ್ತರ ಕರ್ನಾಟಕದ ಜಾನಪದ ಸಾಹಿತ್ಯವು ನಮ್ಮ ಸಾಂಸ್ಕೃತಿಕ ಅಸ್ತಿತ್ವದ ಪ್ರತೀಕವಾಗಿದೆ. ಜಾನಪದದ ಹೆಸರಿನಲ್ಲಿ ಅಶ್ಲೀಲತೆ ಮತ್ತು ಅಸಭ್ಯ ಪದಗಳನ್ನು ಬಳಸುವುದು ಉತ್ತರ ಕರ್ನಾಟಕದ ಜಾನಪದ ಪರಂಪರೆಯನ್ನು ಹಾಳುಮಾಡುವ ಕೃತ್ಯವಾಗಿದ್ದು, ಮಹಿಳೆಯರ ಗೌರವಕ್ಕೂ ಸಮಾಜದ ನೈತಿಕತೆಯಿಗೂ ಭಾರೀ ಧಕ್ಕೆಯಾಗಿದೆ. ಇಂತಹ ಪ್ರವೃತ್ತಿಗಳಿಗೆ ಕಾನೂನು ಕ್ರಮಗಳ ಜತೆಗೆ ಸಮಾಜದ ಜಾಗೃತಿಯೂ ಅಗತ್ಯವಾಗಿದೆ. ಕಲಾವಿದರು, ಜನಸಾಮಾನ್ಯರು ಮತ್ತು ಆಡಳಿತ ವ್ಯವಸ್ಥೆ ಒಟ್ಟಾಗಿ ಜವಾಬ್ದಾರಿಯುತವಾಗಿ ನಡೆದುಕೊಂಡಾಗ ಮಾತ್ರ ಜಾನಪದ ಸಾಹಿತ್ಯದ ಘನತೆ ಉಳಿಸಿ, ಮುಂದಿನ ತಲೆಮಾರಿಗೆ ಶುದ್ಧ ಸಂಸ್ಕೃತಿ ವರ್ಗಾಯಿಸಲು ಸಾಧ್ಯವಾಗುತ್ತದೆ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR